ರಾಷ್ಟ್ರೀಕರಣದ ವಿಚಾರದಲ್ಲಿ ತಪ್ಪಾಗಿ ಬಹಳ ನಂಬಿಕೆ ಇದೆ ಎಂದು ತಾವುಗಳು ಹೇಳಿದ್ದೀರಿ. ಆದರೆ ಮೊನ್ನೆ ಕ್ಯಾಬಿನೆಟ್‌ನಲ್ಲಿ ೧೨–೧ ಸೀಟ್ ಮ್ಯಾಕ್ಸಿಕ್ಯಾಬ್‌ಗಳಿಗೆ ಪರ್ಮಿಶನ್ ಕೊಡುತ್ತೀರಿ ಎಂದು ಹೇಳಿದ್ದಾರೆ. ದಯಮಾಡಿ ಹಾಗೆ ಮಾಡಬೇಡಿ, ಇದರ ಬಗ್ಗೆ ತಾವುಗಳು ಪುನರ್‌ಪರಿಶೀಲನೆ ಮಾಡಬೇಕಾಗುತ್ತದೆ. ತಾವು ಹೀಗೆ ಮಾಡಿ ಇಂಡೈರೆಕ್ಟ್ ಆಗಿ ದಿನ್ಯಾಶನಲೈಸೇಶನ್ ಮಾಡುವುದಕ್ಕೆ ಹೊರಟಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ಹೀಗಾದರೆ ಒಂದು ಕೆಂಪು ಬಸ್‌ನ ಹಿಂದೆ ಮತ್ತು ಮುಂದೆ ಒಂದೊಂದು ಮೆಟಡಾರ್ ಇರುತ್ತವೆ. ನೀವು ೧೨ ಜನರಿಗೆ ಪರ್ಮಿಶನ್ ಕೊಟ್ಟರೆ ಅವರು ೨೫ ಜನರನ್ನು ಹಾಕಿಕೊಂಡು ಓಡಿಸುತ್ತಾರೆ ನಿಮ್ಮ ಬಸ್ ಕಂಡಕ್ಟರ್-ಡ್ರೈವರ್‌ಗಳ ಜೊತೆಗೆ ಅವರು ಸಂಬಂಧ ಇಟ್ಟುಕೊಳ್ಳುತ್ತಾರೆ. ಇದರಿಂದಾಗಿ ಸಾಕಷ್ಟು ದುಷ್ಪರಿಣಾಮ ಉಂಟಾಗಬಹುದು. ದಯಮಾಡಿ ಇದನ್ನು ಜಾರಿಗೆ ಕೊಡಬೇಡಿ ಎಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್.—ಒಂದು ವೇಳೆ ತಾವುಗಳು ಹೇಳಿದ ಹಾಗೆ ಯಾರಾದರೂ ಹ್ಯಾಂಡ್‌ಬಿಲ್ ಮಾಡಿ ಹಂಚಿದ್ದರೆ ಅದು ಖಂಡಿತಾ ತಪ್ಪು. ಅಂಥವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಓವರ್‌ಟೈಮ್ ಕೊಡುವಂಥಾದ್ದು ಬಿಟಿಎಸ್ ಲಾಭದಲ್ಲಿದ್ದರೆ ಮಾತ್ರ ಕೊಡಬೇಕೆಂದು ಟೈಅಪ್ ಮಾಡುತ್ತಾ ಇದ್ದಾರೆ. ಬಿಟಿಎಸ್ ದರವನ್ನು ಎರಡು ವರ್ಷಕ್ಕೊಮ್ಮೆ ಹೆಚ್ಚಿಗೆ ಮಾಡುವ ಬಗ್ಗೆ ಚರ್ಚೆ ನಡೆಯುತ್ತಾ ಇದೆ ಇನ್ನು ಬೈಫರ್‌ಕೇಷನ್ ವಿಚಾರವು ಇನ್ನೂ ಕ್ಯಾಬಿನೆಟ್ ಮುಂದೆ ಇದೆ. ಮಾನ್ಯ ಸದಸ್ಯರು ಮ್ಯಾಕ್ಸಿಕ್ಯಾಬ್ ಬಗ್ಗೆ ಆಕ್ಷೇಪಣೆ ಮಾಡಿದ್ದಾರೆ. ಇದನ್ನು ತಾವುಗಳು ಕೂಡ ಕೊಟ್ಟಿರುತ್ತೀರಿ. ಮೆಜೆಡಾರ್‌ನಲ್ಲಿ ೧೦ ಸೀಟ್ ಇದ್ದರೆ ಮ್ಯಾಕ್ಸಿಕ್ಯಾಬ್‌ನಲ್ಲಿ ೧೨ ಸೀಟ್ಸ್ ಇರುತ್ತದೆ. ಇದು ನಮ್ಮ ರಾಜ್ಯದಲ್ಲಿ ಮೊದಲಿಂದಲೂ ಇದೆ. ತಮ್ಮ ಕಾಲದಲ್ಲಿ ೬–೧ ಸೀಟ್ ಎಂದು ಮೆಟಡಾರ್‌ಗೆ ಪರ್ಮಿಶನ್ ಕೊಟ್ಟಿದ್ದರೂ ೧೨ ಸೀಟಿನ ಟ್ಯಾಕ್ಸ್ ಕಲೆಕ್ಟ್ ಮಾಡುತ್ತಾ ಇದ್ದೀರಿ. ರಿಕಾರ್ಡ್‌ನಲ್ಲಿ ಮಾತ್ರ ೬–೧ ಎಂದು ಇತ್ತು. ಅಷ್ಟೇ ಹೊರತಾಗಿ ಬೇರೆ ಯಾವ ವ್ಯತ್ಯಾಸವೂ ಇರಲಿಕ್ಕಿಲ್ಲ.

ಶ್ರೀ ಪಿ.ಜಿ ಆರ್. ಸಿಂಧ್ಯ.—ನಾವು ಏನು ಮಾಡಿದೆವು ಎಂದರೆ ಐದು ಪ್ಲಸ್ ಒಂದು ಆರ್ ಪ್ಲಸ್ ಒಂದು ಎಂದು ಹೆಚ್ಚು ಮಾಡುವುದಕ್ಕೆ ಪ್ರಾವಿಷನ್ ಇರಲಿಲ್ಲ ಆದಕ್ಕಾಗಿ ಟ್ಯಾಕ್ಸಿಯಾಲ್ಲಿರುವ ಸ್ಪೇಸ್ ಆಧಾರಿಸಿ ಟ್ಯಾಕ್ಸ್ ಹಾಕಿದೆ ಕೆಂದು ಇಲ್ಲಿ ಅಮೆಂಡ್‌ಮೆಂಟ್ ತಂದೆವು ಆದರೆ ಅದಂ ಹೈಕೋರ್ಟ್‌ನಲ್ಲಿ ಚಾಲೆಂಜಾಯಿತು ಆಲ್ಲಿ ನಮ್ಮ ಕಡೆಗೇ ತೀರ್ಪಾಯಿತು. ಈಗ ನೀವು ಅದನ್ನು ಇಂಪ್ಲಿಮೆಂಟ್ ಮಾಡಿ. ನಾನು ಹೇಳಿರುವುದು the very concept of giving permits to these matador vans leads to denationalisation.

ಶ್ರೀ ಕೆ. ಜೆ ಜಾರ್ಜ್.—ಅವರ ಕಾಲದಲ್ಲಿ ಏನಾಗಿತ್ತು ಎಂದರೆ ಆರು ಪ್ಲಸ್ ಒಂದು ಎಂದು ೧೯೭೬ರ ಕಾಂಟ್ರಾಕ್ಟ್ ಕ್ಯಾರೇಜಸ್ ಅಬಾಲಿಷನ್ ಆಕ್ಟ್ ಪ್ರಕಾರ ಕೊಡಲಾಗದಿದ್ದಕ್ಕಾಗಿ ಸ್ಪೇಸ್ ಪ್ರಕಾರ ಕೊಟ್ಟರು. ಇವತ್ತು ನಾವು ೧೨ ಸೀಟಿಗೆ ಟ್ಯಾಕ್ಸನ್ನು ಕಲೆಕ್ಟ್ ಮಾಡುವಾಗ ಅದನ್ನು ರೆಗ್ಯುಲರೈಸ್ ಮಾಡಲು ಕೂಡ ತೀರ್ಮಾನ ತೆಗೆದುಕೊಂಡಿದ್ದೇವೆ ನಾನೂ ಕೂಡ ಗುಲ್ಬರ್ಗಾ ಕಡೆಗೆ ಹೋಗಿ ಬಂದಿದ್ದೇನೆ. ಗ್ರಾಮೀಣ ಜನರಿಗೆ ಸಾರಿಗೆ ಸೌಲಭ್ಯ ಒದಗಿಸಬೇಕೆಂದು ಈ ತೀರ್ಮಾನ ತೆಗೆದುಕೊಂಡಿದ್ದೇನೆ. ಹೊಸ ಎಂ. ಡಿ. ಶೆಣೈ ಬಂದಮೇಲೆ ಯಾವುದೇ ಪ್ರಮೋಷನ್ ಕೊಡಲಿಲ್ಲ ನಾನೇ ಚೇರ್ಮನ್‌ನಾಗಿ ಮಾಡಿದ್ದೇನೆ ಅಷ್ಟೆ. ಅವರು ಒಳ್ಳೆಯ ಅಧಿಕಾರಿಗಳು. ಬಿಎಚ್‌ಎಲ್‌ದು ಎಲೆಕ್ಟ್ರಿಕ್ ಬಸ್ ಬಗ್ಗೆ ಹೇಳಿದ್ದಾರೆ. ನಾನು ಟ್ರಾನ್ಸ್‌ಪೋರ್ಟ್ ಕಮಿಷನರನ್ನು ಕರೆಯಿಸಿ ಮಾತಾಡಿದ್ದೇನೆ. ಒಂದೆರಡನ್ನು ಪ್ರಯೋಗಾರ್ಥವಾಗಿ ಬಿಡಿಸುತ್ತೇನೆ.

ಉಪಸಭಾಧ್ಯಕ್ಷರು.—ಇಲ್ಲಿಗೆ ಸಾರಿಗೆ ಇಲಾಖೆ ಮೇಲಿನ ಚರ್ಚೆಗೆ ಸಚಿವರ ಉತ್ತರ ಮುಗಿಯಿತು. ಇನ್ನು ಮುಂದೆ ಸಹಕಾರ ಸಚಿವರಿಂದ ಉತ್ತರ.

ಬೇಡಿಕೆಗಳ ಮೇಲಿನ ಚರ್ಚೆಗೆ ಸಹಕಾರ ಸಚಿವರಿಂದ ಉತ್ತರ

ಶ್ರೀ ಹೆಚ್. ಆರ್. ರಾಜು (ಸಹಕಾರ ಸಚಿವರು)—ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಸಹಕಾರ ಇಲಾಖೆಯ ಬೇಡಿಕೆಯ ಚರ್ಚೆಯಲ್ಲಿ ಭಾಗವಹಿಸಿ ಅವರವರ ಅನಿಸಿಕೆ ಮತ್ತು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬಹು ಮುಖ್ಯವಾಗಿ ಈ ಸಹಕಾರ ಇಲಾಖೆಯ ಚರ್ಚೆಯಲ್ಲಿ ಹಿರಿಯ ಸದಸ್ಯರಾದ ಶ್ರೀ ವಿಕಾಂತಯ್ಯನವರು ಭಾಗವಹಿಸಿದ್ದಾರೆ ಇವರು ಸಹಕಾರದ ಬಗ್ಗೆ ತಿಳಿದಂಥ ವ್ಯಕ್ತಿ ಹಾಗೂ ಅನೇಕ ಸಂಸ್ಥೆಗಳನ್ನು

ನಡೆಸಿಕೊಂಡು ಬಂದಿದ್ದಾರೆ. ಅವರು ಪ್ರಪ್ರಥಮವಾಗಿ ಒಂದು ವಿಷಯ ತಿಳಿಸಿದರು ಈಗಿನ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಮತ್ತು ಕೃಷಿ ಗ್ರಾಮೀಣ ಬ್ಯಾಂಕ್‌ಗಳ ದೌರ್ಬಲ್ಯದ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳಿದರು. ಈಗಿನ ಪರಿಸ್ಥಿತಿಯಲ್ಲಿ ಯಾವ ರೀತಿ ಸಹಕಾರ ಸಂಘಗಳಿವೆ ಅವು ಯಾವ ಮಟ್ಟದ ರೈತನಿಗೂ ಸಾಲ ಕೊಡುವ ಸ್ಥಿತಿಯಲ್ಲಿಲ್ಲ. ಅವನ್ನು ಪುನಶ್ಚೇತನಗೊಳಿಸುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳಿದ್ದಾರೆ. ಇವುಗಳನ್ನು ಪುನಶ್ಚೇತನಗೊಳಿಸಲು ಯಾವ್ಯಾವ ಕ್ರಮ ತೆಗೆದುಕೊಂಡರೆ ಸರಿಹೋಗುವುದೆಂದು ತಿಳಿವು ಹೇಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುತ್ತೇನೆ, ಎರಡನೆಯದಾಗಿ ಗುರುಪಾದಪ್ಪನವರು, ಏಕಾಂತಯ್ಯನವರು ಮಾತಾಡುತ್ತ ಅಲ್ಪಾವಧಿ ಸಾಲ ದೀರ್ಘಾವಧಿ ಸಾಲಗಳು ಏನಿವೆ ಅದನ್ನೂ ಒಂದೇ ಸಂಸ್ಥೆಯಿಂದ ಸಾಲ ಕೊಡುವ ವ್ಯವಸ್ಥೆಯಾಗಬೇಕು.

ಅದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದೇರೀತಿ ಈ ಬಡ್ಡಿ ರಿಯಾಯಿತಿಯ ಯೋಜನೆಯ ಬಗ್ಗೆ ಮಾನ್ಯ ಹಿರಿಯ ಸದಸ್ಯರುಗಳಾದ ಏಕಾಂತಯ್ಯನವರು ಆಚಾರ್‌ರವರು ಮತ್ತು ಯಡಿಯೂರಪ್ಪನವರು ಕೂಡಾ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬಡ್ಡಿ ರಿಯಾಯಿತಿಯ ಬಗ್ಗೆ ೨-೧೦-೮೯ ರಿಂದ ಆ ಯೋಜನೆ ಜಾರಿಗೆ ಬರಬೇಕಾಗಿತ್ತು, ಆ ಯೋಜನೆಯನ್ನು ಜಾರಿಗೆ ತರುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆ. ನಬಾರ್ಡ್‌ನಿಂದ ಇದಕ್ಕೆ ಆಕ್ಷೇಪಣೆ ಬಂದುದರಿಂದ ತಾತ್ಕಾಲಿಕವಾಗಿ ಈ ಯೋಜನೆ ಹಾಗೆಯೇ ನಿಂತಿದೆ. ಅದನ್ನು ಪುನರ್ ವ್ಯವಸ್ಥೆ ಮಾಡಲಿಕ್ಕೋಸ್ಕರ ನಾವು ಮಹಾರಾಷ್ಟ್ರಕ್ಕೆ ನಮ್ಮ ಅಧಿಕಾರಿಗಳನ್ನು ಕಳುಹಿಸಿದ್ದೇನೆ. ಈ ಇಂಟರೆಸ್ಟ್ ಸಬ್ಸಿಡಿ ಸ್ಕೀಮ್ ಎಂದು ಏನು ಈ ಸರ್ಕಾರ ಬಳಸಿದೆ. ಆ ರೀತಿಯಲ್ಲಿಯೇ ಹೋದರೆ ಹಣ ಕೊಡುವುದಕ್ಕಾಗುವುದಿಲ್ಲ ಎಂದು ನಬಾರ್ಡ್‌ನವರು ಹೇಳಿದರು ಇದರ ಬಗ್ಗೆ ನಾನು ವಿಚಾರಿಸಿದಾಗ ಇದರ ಬಗ್ಗೆ ಒಂದು ಉಪಯುಕ್ತವಾದ ನೀತಿ ಬಂತು. ಈ ಇಂಟರೆಸ್ಟ್ ಸಬ್ಸಿಡಿ ಸ್ಕೀಮ್ ಬದಲಿಗೆ ಪ್ರೊಡಕ್ಷನ್ ಇನ್‌ಸೆಂಟೀವ್ ಸ್ಕೀಮ್ ಎನ್ನುವ ಒಂದು ಪದವನ್ನು ಉಪಯೋಗಿಸಿದರೆ ನಬಾರ್ಡ್‌ನವರು ಈ ಸಾಲವನ್ನು ಮಂಜೂರು ಮಾಡುತ್ತಾರೆಂದು ತಿಳಿದಿತು ಈ ರೀತಿ ಮಾಡಿದರೆ ಹಣ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎಂದು ಆಂದಾಗ ಇದನ್ನು ಮಾಡಬಿಟ್ಟ ಸರ್ಕಾರ ಇಷ್ಟರಲ್ಲಿಯೇ ಇದರ ಬಗ್ಗೆ ಅಂತಿಮ ರೂಪವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದೇನೆ. ನಮ್ಮ ಮಾನ್ಯ ಸದಸ್ಯರಾದ ಶಾಮಣ್ಣನವರು ಈ ಜೈಪುರ ಹತ್ತಿ ವ್ಯವಸಾಯ ಸಹಕಾರ ಸಂಘದ ಅವ್ಯವಹಾರಗಳ ಬಗ್ಗೆ ಚರ್ಚೆಯನ್ನು ಮಾಡಿದರು. ಇವರ ಬಗ್ಗೆ ಈಗಾಗಲೇ ಒಳ್ಳರ ಅನ್ವಯ ವಿಚಾರಣೆ ಪ್ರಾರಂಭವಾಗಿದೆ. ಇದಕ್ಕೆ ತಡೆಯಾಜ್ಞೆ ಹೈಕೋರ್ಟ್ ಕೊಟ್ಟಿದೆ ಎಂದು ಹೇಳುತ್ತೇನೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸದಸ್ಯರಲ್ಲಿ ಹೇಳುತ್ತೇನೆ ಮಾನ್ಯ ಸದಸ್ಯರಾದಂಥ ಏಕಾಂತಯ್ಯನವರು ಮತ್ತು ಹಿರಿಯ ಸದಸ್ಯರಾದಂಥ ಗುರುಪಾದಪ್ಪನವರು ಚರ್ಚಿಸುತ್ತಾ ಸಹಕಾರಿ ಕಾಯ್ದೆಗೆ ಸಮಗ್ರ ಪಾದ ತಿದ್ದುಪಡಿಯನ್ನು ತರುವ ಬಗ್ಗೆ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ನಾನು ಹೇಳುವುದಾದರೆ ಈ ಕಾಯ್ದೆಗೆ ಸಮಗ್ರವಾದ ಬದಲಾವಣೆ ಆಗತ್ಯ ಇದೆ ಎಂದು ಸರ್ಕಾರದ ಗಮನದಲ್ಲಿದೆ. ಈ ಉದ್ದೇಶದಿಂದ ಜಯರಾಜ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಿತ್ತು. ಆ ವರದಿ ಬಂದಿದೆ ಆ ವರದಿಯನ್ನು ಪರಿಶೀಲನೆ ಮಾಡಿದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಈ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಚರ್ಚೆಯಲ್ಲಿ ಮುಂದುವರಿದಂಥ ಏಕಾಂತಯ್ಯನವರು ಸುಸ್ತಿದಾರರಿಗೆ ಚುನಾವಣೆಯಲ್ಲಿ ಮತ ನೀಡುವ ಹಕ್ಕಿನ ಬಗ್ಗೆ ಪ್ರಸ್ತಾಪ ಮಾಡಿದರು. ಹಾಗೂ ಹಿರಿಯರಾದಂಥ ಕೆ. ಹೆಚ್. ಪಾಟೀಲರು ಕೂಡಾ ಅದರ ಬಗ್ಗೆ ನಿನ್ನೆ ಕ್ಲಾರಿಫಿಕೇಷನ್ನು ಕೊಟ್ಟಿರುವುದರಿಂದ ಬಹುಶಃ ಅದರ ಬಗ್ಗೆ ಪುನಃ ವಿವರ ಹೇಳುವ ಅಗತ್ಯ ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಅದೇ ರೀತಿ ಏಕಾಂತಯ್ಯನವರು ಮುಂದುವರಿದು ಪಶುಸಂಗೋಪನೆ ಇಲಾಖೆಯ ಕಲಂ ೫೪ರ ಪ್ರಕಾರ ಅಧಿಕಾರವನ್ನು ಕೊಟ್ಟಿರುವ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ತಮಗೆ ಗೊತ್ತಿದೆ ಪತಕ್ಕಾಗಿ ಆ ಅಧಿಕಾರವನ್ನು ಕೊಡಬೇಕು. ಎಂದು ಲೆಕ್ಕ ಪರಿಶೋಧಕರ ಪತಿಯಿಂದ ಅವರಿಗೆ ಕಷ್ಟವಾದ್ದರಿಂದ ಅನಿವಾರ್ಯವಾಗಿ ಇದನ್ನು ಅನಿಮಲ್ ಹಸ್‌ಬೆಂಡ್ರಿಗೆ ಕೊಡಬೇಕಾಯಿತು. ಹಾಗೆಯೇ ಮುಂದುವರಿದಂಥ ಮಾನ್ಯ ಏಕಾಂತಯ್ಯನವರಂ ೪-೧೨-೯೦ರ ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟಗಳ ಮಹಾಮಂಡಳಿ ಕೆಲವು ಜಿಲ್ಲಾ ಒಕ್ಕೂಟಗಳಿಗೆ ನೀಡಿದ ಆಜ್ಞೆ ಬಗ್ಗೆ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಹೇಳುವುದಾದರೆ ಸರ್ಕಾರ ಕೈಗೊಂಡ ಕಾರ್ಯಕ್ರಮವೆಂದರೆ ಒಂದು ದಿನ ಈ ಒಕ್ಕೂಟದ ಸದಸ್ಯರು ಕಾರ್ಯವನ್ನು ನಿಲ್ಲಿಸಿದರೆ ಸುಮಾರು ೬೦ ಲಕ್ಷ ರೂಪಾಯಿ ಹಾಲು ಉತ್ಪಾದನಾ ವೆಚ್ಚ ಬೆರುತ್ತದೆ ಎಂದು ಮಾಹಿತಿ ಬಂದಿರುವುದರಿಂದ ಈ ಒಂದು ಅನಿವಾರ್ಯವಾದಂಥ ಪರಿಸ್ಥಿತಿಯಲ್ಲಿ ನಾವು ಅಂದಿನ ಪಶುಸಂಗೋಪನಾ ಸಚಿವರ

ಕೋರಿಕೆಯಂತೆ ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕಾಯಿತು. ಅದೇ ರೀತಿ ಮುಂದುವರಿದಂತಹ ಶ್ರೀಮಾನ್ ವಿಕಾಂತಯ್ಯನವರು ಹಾಗೂ ಆಚಾರ್ಯರವರು ಕರ್ನಾಟಕ ಸಹಕಾರಿ ಗೃಹ ನಿರ್ಮಾಣ ಮಹಾ ಮಂಡಲ ಇವರ ವಿರುದ್ಧ ದೂರು ಮತ್ತು ತನಿಖೆ ಎಂದು ಹೇಳಿದರಂ. ಇದರ ಬಗ್ಗೆ ಪ್ರತಿಯೊಬ್ಬರಿಗೂ ಗೊತ್ತಿರುವ ಹಾಗೆ ಕಾಲೇಜುಗಳಿಗೆ ಸರಬರಾಜು ಆದಂತಹ ಸುಮಾರು ೪ ಕೋಟಿ ರೂಪಾಯಿಗಳ ಸಾಮಾನುಗಳ ಗುಣಮಟ್ಟ ಕಡಿಮೆ ಆಗಿದೆ. ಈ ಬಗ್ಗೆ ದೂರುಗಳು, ತನಿಖೆಗೆ ಒತ್ತಾಯ ಬಂದಮೇಲೆ ವಿವರವಾದ ತನಿಖೆ ಬಗ್ಗೆ ಸರ್ಕಾರ ಸಿ.ಓ.ಡಿ.ಗೆ ವಹಿಸಿಕೊಟ್ಟಿದೆ ಎಂಬ ವಿಚಾರವನ್ನು ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಅದೇ ರೀತಿ ಗೊಬ್ಬರ ಮತ್ತು ಬೀಜಗಳ ಮೇಲೆ ವಿಕಾಂತಯ್ಯನವರು ಕಾಮೆಂಟ್ ಮಾಡಿದರು. ಬೀಜಗಳನ್ನು ಗುಲ್ಬರ್ಗಾದಲ್ಲಿ ಕೊಂಡರೂ ಅವು ಬೆಂಗಳೂರಿಗೆ ಸಿಗುವುದಿಲ್ಲ ಹಾಗೂ ಗೊಬ್ಬರದ ಮೇಲೆ ಅಧಿಕ ಲಾಭವನ್ನು ಇಟ್ಟುಕೊಂಡು ಮಾಡುತಿದ್ದಾರೆ ಎಂದು ಹೇಳಿದರು ಆದರೆ ನನಗೆ ತಿಳಿದ ಮಟ್ಟಿಗೆ ಈ ಬೆಲೆ ಏನು ಇದೆ. ಇದು ಆಗಾಗ್ಗೆ ಖಾಸಗೀ ಬೆಲೆಗೆ ಏನು ಇವೆ, ಅವನ್ನನುಸರಿಸಿ ಇವರು ಸೂತ್ರವನ್ನು ಕಂಡು ಹಿಡಿದುಕೊಂಡು ಹೋಗುವುದು ನಡೆದಿದೆ. ಆದೇ ರೀತಿ ಇಂತಹ ಅವ್ಯವಹಾರ ಆಕಸ್ಮಾತ್ ಕಂಡರೆ ಮಾನ್ಯ ಸದಸ್ಯರು ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅದೆನ್ನು ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಅಥವಾ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನಿರ್ಧರಿಸಿ ಆ ರೀತಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಮಾನ್ಯ ಸದಸ್ಯರಾದ ಆಚಾರ್‌ರವರು, ಸೋಮಪ್ಪ ಸುವರ್ಣ ಅವರು, ಗುರುಪಾದಪ್ಪನವರು, ವಿಕಾಂತಯ್ಯನವರು ಎಲ್ಲರೂ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಚರ್ಚೆ ಮಾಡಿದರು ಇಲ್ಲಿ ಅವ್ಯವಹಾರ ವಾಗಿರುವುದು ನಿಜ, ಜಿ. ವಿ. ಕೆ. ರಾವ್ ಸಮಿತಿ ಸೆಕ್ಷನ್ ೬೪ರ ಪ್ರಕಾರ ತನಿಖೆ ಮಾಡಿದೆ ಗುರುಪಾದಪ್ಪನವರು ಹೇಳುತ್ತಿದ್ದರು ೩೦ 'ಬಿ' ಎನ್ನು ಇವರು ಸಾಮಾನ್ಯವಾಗಿ ಉಪಯೋಗಿಸುತ್ತಿದ್ದಾರೆ. ಎಂದು ನನಗೆ ತಿಳಿದ ಮಟ್ಟಿಗೆ ಈ ಒಂದು ಸಹಕಾರ ಸಂಘದ ವಿಚಾರದಲ್ಲಿ ೩೦ 'ಬಿ' ಉಪಯೋಗಿಸದೇ ಬಿಟ್ಟರೆ ಕೆ ಎಂ ಎಫ್ ಒಂದಕ್ಕೆ ೬೦ ಲಕ್ಷ ರೂಪಾಯಿಗಳ ಲಾಸ್ ಆಗುತ್ತದೆ. ಇಂತಹ ಒಂದು ಪ್ರಸಂಗ ಬಿಟ್ಟರೆ ಬೇರೆ ಯಾವುದೂ ಕಾಣುತ್ತಿಲ್ಲ. ಈ ೩೦ 'ಬಿ' ಅನ್ವಯ ಮಾಡುತ್ತಿದ್ದೇವೆ ಅಂದರೆ ಸದಸ್ಯರಿಗೆ ಮತ್ತೆ ನಿವೇಶನ ಕೊಡಬಾರದು ಎಂಬ ಒಂದು ಉದ್ದೇಶದಿಂದ ಇಲ್ಲದಿದ್ದರೆ, ನಾವು ಮಾಡುವುದೆ ಒಂದು, ಇವರು ಕಾರ್ಯರೂಪಕ್ಕೆ ತರುವುದೇ ಒಂದು ಆಗಿದೆ. ೩೦'ಬಿ' ಇಲ್ಲಿ ಅನಿವಾರ್ಯ ಆಗಿರುತ್ತದೆ. ಈ ಒಂದು ವಿಷಯವನ್ನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ ಹಾಗೆಯೇ ನಮ್ಮ ವಿಕಾಂತಯ್ಯನವರು ಇದೇ ಪ್ರಸ್ತಾಪವನ್ನು ಮುಂದುವರಿಸಿ ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ ಡಿಸ್ಟಿಲರಿಯನ್ನು ಲೀಸ್ ಮಾಡುವ ಬಗ್ಗೆ ಹೇಳಿದರು. ಇದರ ಬಗ್ಗೆ ಹೇಳುವುದಾದರೆ ೧೫-೨-೮೧ರಲ್ಲಿ ಡಿ.ಟಿ ಎಫ್ ಸಿ. ಪ್ರೈವೇಟ್ ಲಿಮಿಟೆಡ್‌ಗೆ ಇದನ್ನು ೮ ಲಕ್ಷ ರೂಪಾಯಿಗೆ ಗುತ್ತಿಗೆ ೧೦ ವರ್ಷ ಲೀಸ್ ಮಾಡಿ ೩೦-೧೧-೯೧ಕ್ಕೆ ಇದರ ಮುಕ್ತಾಯ ಆಗುವುದು ಇತ್ತು. ಈಗ ಪ್ರಶ್ನೆ ಬಂದಿರುವುದು ಏನು ಅಂದರೆ ಇದು ಮುಕ್ತಾಯ ಆಗುವ ಮೊದಲೇ, ಅಂದರೆ ೧೫-೨-೮೮ರಲ್ಲಿ ಹಿಂದಿನ ಆಡಳಿತ ಮಂಡಲಿ ಪುನಃ ಹತ್ತು ವರ್ಷಗಳ ಕಾಲ ಇದನ್ನು ಎಕ್ಸ್‌ಟೆಂಡ್ ಮಾಡಿದರು ಇದರ ಹಿನ್ನೆಲೆ ಏನು ಎಂದು ಪತ್ತೆ ಮಾಡಬೇಕಾಗಿದೆ. ಅದಕ್ಕೋಸ್ಕರ ಈ ಕಡತವನ್ನು ತರಿಸಿಕೊಂಡು ಯಾವ ರೀತಿ ಇದನ್ನು ಪರಿಶೀಲಿಸಿದರೆ ಸರಿ ಹೋಗಬಹುದು ಎಂದು ಯೋಚಿಸುತ್ತಿದ್ದೇನೆ. ಇಂತಹ ಒಂದು ವಿಶ್ವಾಸವನ್ನು ಮಾನ್ಯ ಸದಸ್ಯರಲ್ಲಿ ಕೂಡ ಕೇಳುತ್ತಿದ್ದೇನೆ. ಏಕೆಂದರೆ ಇವರು ಇದ್ದಾಗಲೂ ಈ ಕಾರ್ಯಕ್ರಮ ನಡೆಯುತ್ತಿತ್ತು. ಇವರು ಒಂದು ಮಾತು ಹೇಳಿದರು. ಇದರ ಬಗ್ಗೆ ರಿಜಿಸ್ಟರ್ ಮಾಡಬೇಡಿ ಎಂದು ಹೇಳಿದರೂ ಕೂಡ ಆಫಿಸ್ಸೆಂಟ್ ರಿಜಿಸ್ಟ್ರಾರ್ ಅವರು ರಿಜಿಸ್ಟರ್‌ಮಾಡಿದರು ಎಂದು ಮಾನ್ಯ ವಿಕಾಂತಯ್ಯನವರ ಹೇಳಿಕೆಯಲ್ಲಿ ಚರ್ಚೆಯಲ್ಲಿ ಇದೆ.

ಇದರ ಹಿನ್ನೆಲೆ ಏನು ಎಂದು ತಿಳಿಯಲು ಕಡತವನ್ನು ಸ್ಪಡಿ ಮಾಡಿದರೆ ಮಾತ್ರ ಗೊತ್ತಾಗುತ್ತದೆ. ಇದರ ಬಗ್ಗೆ ಸಮಗ್ರವಾದ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಹಿಂದಿರಿಯುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನೂಲಿನ ಗಿರಣಿ ಬಗ್ಗೆ ಮತ್ತು ಹತ್ತಿ ಬಗ್ಗೆ ಮಾನ್ಯ ವಿಕಾಂತಯ್ಯನವರು ಹಾಗೂ ಗುರುಪಾದಪ್ಪನವರು ಅವ್ಯವಹಾರ ನಡೆದಿದೆ ಎಂದು ಹೇಳಿದರು. ಆದರ ಬಗ್ಗೆ ನಾನು ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿರಿಯ ಸದಸ್ಯರಾದ ಮಾನ್ಯ ಸಾಂದ್ರರವರು ಕರ್ನಾಟಕ ರಾಜ್ಯ ಹತ್ತಿ ಕೈವಗ್ಗ ನೇಕಾರರ ಸಂಘದ ಸಂಯೋಜಿತದಲ್ಲಿ ವಿಶೇಷಾಧಿಕಾರಿಗಳ ಅವಧಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಆಕ್ಷೇಪಣೆ ಮಾಡಿ ಹೇಳಿದ್ದಾರೆ, ಇದನ್ನು ನಾನು ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಂದುವರಿದ ಸಾಂದ್ರರವರು ಕರ್ನಾಟಕ ಬಾರುಕಟ್ಟೆ ನಿಯಂತ್ರಣದ ತಿದ್ದುಪಡಿ ಬಗ್ಗೆ ಹೇಳಿದರು. ಈ ಕಾಯಿದೆಯ ಸಮಗ್ರ ತಿದ್ದುಪಡಿ ಬಗ್ಗೆ ಅಶ್ವಿಜಾಳ ಹೆಗಡೆ ಸಮಿತಿಯವರು ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಈ ಬಗ್ಗೆ ಪರಿಶೀಲನೆ ನಂತರ ಕ್ರಮ ಕೈಗೊಳ್ಳಲಾಗು

ಧದು ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಾಂಬ್ರರವರು ಎಪಿಎಂಸಿ ಹುಬ್ಬಳ್ಳಿ, ಕಾರ್ಯವ್ಯಾಪ್ತಿಗೆ ಬಗ್ಗೆ ಹೇಳಿದರು ಎಪಿಎಂಸಿ ಹುಬ್ಬಳ್ಳಿ, ಕಲ್ಘಟಗಿ, ಶಿಗ್ಗಾಂ ಹಾಗೂ ಸವಣೂರು ತಾಲ್ಲೂಕಿನ 91 ಹಳ್ಳಿಗಳು ಒಳಪಡುತ್ತವೆ. ಹುಬ್ಬಳ್ಳಿ ಮಾರುಕಟ್ಟೆ ಏನಿದೆ ಅವನ್ನು ಎರಡು ಭಾಗವಾಗಿ ವಿಭಜನೆ ಮಾಡಿ, ಸಬ್‌ಮಾರ್ಕೆಟ್ ಮಾಡಿ ಕಲ್ಘಟಗಿಗೆ ಕೊಡುವ ವಿಚಾರ ಪ್ರಸ್ತಾಪಿಸಿದರು. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಡಿಸ್ಕಸ್ ಮಾಡುವುದರಿಂದ, ಶೀಘ್ರದಲ್ಲಿಯೇ ಮಾರುಕಟ್ಟೆಯನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಯುಡಿಯೂರಪ್ಪನವರು ಚರ್ಚೆ ಮಾಡುತ್ತಾ, ಸಾಲ ಮನ್ನಾ ಮಾಡುವ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹೇಳಿದ್ದಾರೆ. ಬಹುಶ: ಈ ಬಗ್ಗೆ ನಾನು ಹೇಳುವುದಾದರೆ, ಇದರ ಬಗ್ಗೆ ಸಂಕಷ್ಟ ಚರ್ಚೆ ಈ ಸದನದಲ್ಲೂ ಮತ್ತು ಮೇಲ್ಮನೆ ಸದನದಲ್ಲೂ ದಿವಸಗಟ್ಟಲೆ ನಡೆದು, ಚರ್ಚೆ ಆದನಂತರ ಮಾನ್ಯ ಮುಖ್ಯ ಮಂತ್ರಿಗಳು ಸರ್ಕಾರದ ಧೋರಣೆಯು ಯಾವರೀತಿ ಇದೆ ಎನ್ನುವುದನ್ನು ವಿಸ್ತಾರವಿನಿಮಯ ಮಾಡಿ ತಿಳಿಸಿದ್ದಾರೆ. ಬಹುಶ: ಅದನ್ನು ಮತ್ತೆ ಪುನರಾವರ್ತಿಸುವುದು ಅನಿವಾರ್ಯ ಎಂದು ಮಾನ್ಯ ಸದಸ್ಯರಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಹಾಗೂ ಈ ಸಾಲ ಮನ್ನಾ ಬಗ್ಗೆ ಅಂತಿಮರೂಪ ಪಡೆದ ನಂತರ ಹೆಚ್ಚಿನ ಮಾಹಿತಿಯನ್ನು ನೀಡಲಾಗುವುದು ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಆಚಾರ್ಯರವರು ಮತ್ತು ಮಾನ್ಯ ಶಾಮಣ್ಣನವರು ಕ್ಯಾಮ್ಕೋ ಸಂಸ್ಥೆ ಬಗ್ಗೆ ಹೇಳುತ್ತಾ ಇದ್ದರು ಈ ಕ್ಯಾಮ್ಕೋ ಒಂದು ದೊಡ್ಡ ಸಂಸ್ಥೆ. ಇದರ ಬಗ್ಗೆ ಅವರಿಬ್ಬರಲ್ಲೂ ಭಿನ್ನಾಭಿಪ್ರಾಯ ಬಂತು. ಏಕೆಂದರೆ ಮಾನ್ಯ ಆಚಾರ್ಯರವರು ಕ್ಯಾಮ್ಕೋ ಸಂಸ್ಥೆ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿರುವ ಆದರೆ ಮಾನ್ಯ ಶಾಮಣ್ಣನವರೂ ಇದರ ಬಗ್ಗೆ ಹೇಳಿದರು ಬಹುಶ ಶಿವಮೊಗ್ಗದಲ್ಲಿ ಅಡಿಕೆ ಕೊಂಡುಕೊಳ್ಳುವ ಬಗ್ಗೆ ಎಪಿಎಂಸಿಗೆ ಹೋಗಿ ನಡೆದ ವಿಚಾರವೊ ಅಥವಾ ಜನರಲ್ಲಾಗಿ ಏನೊ ಹೇಳುತಾ ಇದ್ದರೊ ಗೊತ್ತಾಗುತ್ತಾ ಇಲ್ಲ. ಇದರ ಬಗ್ಗೆ ಗಮನಹರಿಸಿ ನಾನು ಅದನ್ನು ಪರಿಶೀಲಿಸುತ್ತೇನೆ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ಸದಸ್ಯರಾದ ಗುರುಪಾದಪ್ಪನವರು ವೆಂಕಟೇಶ್‌ರವರು ಆಚಾರ್‌ರವರು ಹಾಗೂ ಯಡಿಯೂರಪ್ಪನವರು, ಸಹಕಾರ ಸಂಘಗಳಲ್ಲಿ ದುರುಪಯೋಗದ ಬಗ್ಗೆ ಅವರು ಜನರಲ್ಲಾಗಿ ಕಾಮೆಂಟ್ ಮಾಡಿದ್ದಾರೆ. ಸಹಕಾರ ಸಂಸ್ಥೆಗಳಲ್ಲಿ ದುರುಪಯೋಗ ಯಾವ ಹಂತದಲ್ಲಿ ಆಗುತ್ತಾ ಇದೆ ಎನ್ನುವುದು ಸಹಕಾರ ಕ್ಷೇತ್ರ ದಲ್ಲಿರುವಂಥವರಿಗೆ ಚೆನ್ನಾಗಿ ಗೊತ್ತು. ಏಕೆಂದರೆ ಅದು ಅಧಿಕಾರಿ ಲೆವೆಲ್‌ನಲ್ಲಾ ಆಗಬಹುದು ಇಷ್ಟೇ ಡೈರೆಕ್ಟರ್ ಲೆವೆಲ್‌ನಲ್ಲೂ ಆಗಬಹುದು. ಅಧ್ಯಕ್ಷರ ಮಟ್ಟದಲ್ಲೂ ಆಗಬಹುದು. ಇಂತಹ ಒಂದು ಪದ್ಧತಿ ಇರುವುದರಿಂದ ಯಾವರೀತಿ ಈ ಅವ್ಯವಹಾರವನ್ನು ಬಗೆಹರಿಸಬಹುದು ಎಂದು ಮಾನ್ಯ ಹಿರಿಯ ಸದಸ್ಯರಾದ ತಾವು ಯಾವ ರೀತಿ ಉತ್ತಮ ಸಲಹೆಗಳನ್ನು ಕೊಡುತ್ತೀರಿ ಆ ಸಲಹೆಯನ್ನು ಮುಂದುವರಿಸಿಕೊಂಡು ಹೋಗಿ ಇದನ್ನು ತಡೆಗಟ್ಟುವ ಕಾರ್ಯವನ್ನು ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮತಿ ದಮಯಂತಿ ಭೋರೇಗೌಡರು ಒಳ್ಳೆಯ ಸಲಹೆ ಕೊಟ್ಟರು ಆಪೆಕ್ಸ್ ಬ್ಯಾಂಕಿನಲ್ಲಿ ಮಹಿಳೆಯರಿಗೆಸ್ಥಾನ ಮಾನ ನೀಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮುಂದೆ ಆಕ್ಟ್ ಅಮೆಂಡ್‌ಮೆಂಟ್ ಮಾಡುವಾಗ ಇದನ್ನು ಪರಿಶೀಲಿಸಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀಮತಿ ದಮಯಂತಿ ಭೋರೇಗೌಡ.—ನಾಮಿನೇಷನ್‌ಗೆ ಆಕ್ಟ್ ಅಮೆಂಡ್‌ಮೆಂಟ್ ಮಾಡಬೇಕಾಗಿಲ್ಲ.

ಡಾ॥. ಎಚ್.ಆರ್.ರಾಜು.— ಮಾನ್ಯ ಗುರುಪಾದಪ್ಪನವರು ಸಹಕಾರಿ ರಂಗದಲ್ಲಿ ಹಸ್ತಕ್ಷೇಪ ಇರಬಾರದೆಂದು ಹೇಳಿದರು. ಅದರಲ್ಲಿ ಪಕ್ಷಬೇಧ ಇರಬಾರದು. ಆ ಪಕ್ಷ ಈ ಪಕ್ಷ ಎಂದು ಇರಬಾರದು ಎಂದು ಹೇಳಿದರು ಹಿರಿಯ ಸದಸ್ಯರಾದಂಥ ಖಾರ್ಗೆಯವರು ಸಹಕಾರಿ ಪಕ್ಷದ್ದೇ ಒಂದು ಧೋರಣೆ ಎಂದು ಹೇಳಿದರು. ಅದನ್ನು ನಾನು ಕೂಡ ಒಪ್ಪುತ್ತೇನೆ. ಸಹಕಾರಿ ಕ್ಷೇತ್ರದಲ್ಲಿ ಪಕ್ಷಗಳು ಇರಬಾರದು, ನಾಳೆ ನಮ್ಮನ್ನೇ ಕೇಳುತ್ತಾರೆ. ಪಕ್ಷಗಳು ಇದ್ದರೆ ಬಹಳ ಕಷ್ಟ ಯಾವರೀತಿ ಸಹಕಾರಿ ಕ್ಷೇತ್ರವನ್ನು ನಡೆಸಿಕೊಂಡು ಹೋಗಬೇಕು ಎಂದು ಈ ವಿಚಾರದಲ್ಲಿ ಮಾನ್ಯ ವಿಶ್ವಾನಂತಯ್ಯನವರು ದಿಟ್ಟತನದ ನಿಲುವು ತಳೆದಿದ್ದರು ಎನ್ನುವುದು ಚೆನ್ನಾಗಿ ಗೊತ್ತು. ಇದು ನಾನು ಪ್ರಶಂಸೆ ಮಾಡುವುದಲ್ಲ. ವಿಶ್ವಾನಂತಯ್ಯನವರಿಗೆ ಆ ದಿಟ್ಟತನ ಇತ್ತು. ಸಹಕಾರಿ ಬಗ್ಗೆ ಪಕ್ಷ ಬಿಟ್ಟು ಸಹಕಾರಿ ಸಂಸ್ಥೆಗಳು ಚೆನ್ನಾಗಿ ನಡೆಯಬೇಕು ಎನ್ನುವ ಉದ್ದೇಶದಿಂದ ಅವರು ದಿಟ್ಟ ನಿಲುವು ತೆಗೆದುಕೊಂಡಿದ್ದರು. ಅದಕ್ಕಾಗಿ ಈ ವಿಷಯದಲ್ಲಿ ಅವರನ್ನು ನಾನು ಪ್ರಶಂಸೆ ಮಾಡಬೇಕಾಗಿದೆ ಈ ಒಂದು ಧ್ಯೇಯವನ್ನು ನಾನು ಇಟ್ಟುಕೊಂಡು ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವುದಕ್ಕೆ ಪ್ರಯತ್ನವಾಡುತ್ತೇನೆಂದು ಹೇಳುತ್ತೇನೆ ಇನ್ನು ಕಾಮನ್ ಕೇಡರ್ ಅಧಿಕಾರಿಗಳ ಬಗ್ಗೆ ಮಾನ್ಯ ಗುರುಪಾದಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಾರುಕಟ್ಟೆ ಸಂಸ್ಥೆಗಳ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್ ಯೋಜನೆ ಬಗ್ಗೆ ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ. 79 ರಿಂದೀಚೆಗೆ ಸಾಲಿನಲ್ಲಿ ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ

ರಾಜ್ಯದ ಳಲ್ಲಿ ಪ್ರಧಾನ ಮಾರುಕಟ್ಟೆಗಳು ಹಾಗೂ 18 ಉಪ ಮಾರುಕಟ್ಟೆಗಳನ್ನು 9ನಲಕ್ಷದ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. 990 ಅಂಗಡಿಗಳು, ಗೋದಾಮುಗಳನ್ನು ನಿರ್ಮಿಸಲಾಗಿದೆ ಎಂದು ಮಾಹಿತಿ ಇದೆ ರೈತರಿಂದ ಕಮಿಷನ್ ಪಡೆಯುತ್ತಿದ್ದೀರಿ ಎಂದು ತಾವು ಚರ್ಚೆಯಲ್ಲಿ ಹೇಳಿದಿರಿ. ನಾವು ಈ ಬಗ್ಗೆ ಮಾರುಕಟ್ಟೆ ಸಮಿತಿಗಳಲ್ಲಿ ರೈತರಿಗೆ ಮನವರಿಕೆ ಮಾಡಿ ಕೊಟ್ಟರೂ ಯಾವ ರೀತಿಯಲ್ಲಿ. ಯಾವ ವಿಧದಲ್ಲಿ ಯಾರು ಯಾರಿಗೆ ಅಡ್ವಸ್ಟ್‌ಮೆಂಟ್ ಮಾಡುತ್ತಾರೋ ಬಹುಶ. ದಳ್ಳಾಳಿಗಳು ಸಾಲ ಕೊಟ್ಟಿದ್ದರ ಮೇಲೆ ಬಹಿರಂಗ ಪಡಿಸುವುದಿಲ್ಲವೇನೋ. ಬಹಿರಂಗ ಪಡಿಸುವುದಿಲ್ಲ. ಅಧಿಕಾರಿಗಳ ಗಮನಕ್ಕೆ ಬಂದ ಸಂದರ್ಭದಲ್ಲಿ ಲೈಸೆನ್ಸ್ ಕೂಡ ರದ್ದು ಮಾಡಿದ್ದಾರೆನ್ನುವ ಮಾಹಿತಿ ಇದೆ ಇಂಥ ಒಂದು ಕೆಲಸ ಗೊತ್ತಾದರೆ ಸರ್ಕಾರ ಲೈಸೆನ್ಸ್ ಕೂಡ ರದ್ದು ಮಾಡುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಡಾಕ್ಟರ್ ನಂಜಪ್ಪನವರು ಪ್ರಸ್ತಾಪ ಮಾಡುತ್ತಾ. ಹೇಮಾವತಿ ಸಕ್ಕರೆ ಕಾರ್ಖಾನೆ ನಷ್ಟದಲ್ಲಿದೆ ಎಂದು ಹೇಳಿದರು. ಅದು ನಷ್ಟದಲ್ಲಿ ಇಲ್ಲ. 13.44ಲಕ್ಷ ರೂಪಾಯಿ ಲಾಭದಲ್ಲಿದೆ. ಅವರು ಮಾತನಾಡುತ್ತಾ. ಕೊಬ್ಬರಿ ಮತ್ತು ತೆಂಗಿನಕಾಯಿಗೆ ಬೆಲೆ ಕಡಿಮೆಯಾಗುತ್ತಿದೆ ಎಂದು ಹೇಳಿದರು' ಅದನ್ನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ,

೩–೧೦ ಪಿ.ಎಂ.

ಮಾನ್ಯ ಯಡಿಯೂರಪ್ಪನವರು ನಮ್ಮ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುತ್ತಾ. ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ ಕಡಿಮೆ ನೀಡಲಾಗುತ್ತಿದೆ ಎಂದು ತಾವು ಪ್ರಸ್ತಾಪ ಮಾಡಿದ್ದೀರಿ. ತಮಗೆಲ್ಲಾ ಗೊತ್ತಿದೆ. ಸರ್ಕಾರ ಈಗಲೂ ಸಹ ಬದ್ಧವಾಗಿದೆ. ಯಾವ ರೈತ ಸಾಲ ಮರುಪಾವತಿ ಮಾಡಿದ್ದಾನೆ ಅವನಿಗೆ ಪುನರ್‌ವಸತಿ ಇದ್ದೇ ಇದೆ. ಅಂಥಾದ್ದು ಏನಾದರೂ ಗಮನಕ್ಕೆ ತಂದರೆ ಪುನಃ ಸಾಲ ಕೊಡಿಸಲಿಕ್ಕೆ ವಿಶೇಷ ಮಾಡಿಸುತ್ತೇನೆ. ಇನ್ನು ಈ ಚರ್ಚೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದೀರ್ಘವಾಗಿ ಅವರ ಭಾಷಣದಲ್ಲಿ ಮಾತನಾಡುತ್ತಾರೆ. ಮುಂಡಗೋಡ ಸೇವಾ ಸಹಕಾರ ಸಂಘ ಅದರಲ್ಲಿ ಆಗಿರುವ ಅನ್ಯಾಯ ಬಡ ರೈತ ಕಾರ್ಮಿಕರು ಏನು ಬಂಗಾರ ಆಧಾರ ಇಟ್ಟು ಬಿಟ್ಟು ಸಾಲ ತೆಗೆದು ಕೊಂಡಿದ್ದರು, ಅವರಿಗೆ ಏನು ಒಂದು ವ್ಯವಸ್ಥೆ ಮಾಡುತ್ತೀರೆಂದು ಪ್ರಸ್ತಾಪ ಮಾಡಿದ್ದೀರಿ. ತಾವು ಚರ್ಚಿಸುತ್ತಾ ಹೇಳಿದ್ದೀರಿ. ಸುಮಾರು ೯ ಲಕ್ಷ ರೂಪಾಯಿ ಚಿಲ್ಲರೆ ಏನು ಇನ್‌ಷ್ಯೂರೆನ್ಸ್ ಅಮೌಂಟ್ ಇದೆ ಆದಕ್ಕೆ ಆಡ್ಜೆಸ್ಟ್ ಆದರೂ ಕೂಡ ಇನ್ನೂ ೧೨ ಲಕ್ಷ ರೂಪಾಯಿ ಅವರಿಗೆ ದಂಡ ಕೊಡ ಬೇಕಾಗಿರುವುದರಿಂದ, ಆ ಬಗ್ಗೆ ಯಾವ ರೀತಿ ತಾವು ಕೈಗೊಳ್ಳುತ್ತೀರೆಂದು ಹೇಳಿದ್ದೀರಿ. ಇದು ನಿಜವಾಗಿಯೂ ಕ್ಲಿಷ್ಟ ಪ್ರಶ್ನೆ, ಸರ್ಕಾರದ ಪರವಾಗಿ ಕೊಡಲಿಕ್ಕೆ ಆಗುವುದಿಲ್ಲ. ಅದೇ ರೀತಿ ಪೋಲೀಸರ ವಶಕ್ಕೆ ಏನೋ 'ಸಿ' ರಿಪೋರ್ಟ್ ಹೋಗಿ ಇನ್ವೆಸ್ಟಿಗೇಷನ್ ಮಾಡುತ್ತಿದ್ದಾರೆ. ಇದನ್ನು ಇನ್ನೂ ಮುಂದುವರಿಸಿ ಯಾರಿಂದ ಅನ್ಯಾಯ ನಡೆದಿದೆ. ಅಧಿಕಾರಿಗಳಿಂದ ನಡೆದಿದೆಯೋ ಅಥವಾ ಡೈರೆಕ್ಟರ್‌ಗಳಿಂದ ನಡೆದಿದೆಯೋ ಅದನ್ನು ತನಿಖೆ ಮಾಡಿಸಿ ಅವರಿಂದ ಈ ಮೊಬಲಗನ್ನು ವಾಪಸ್ಸು ವಶಪಡಿಸಿಕೊಳ್ಳಬೇಕೆಂದು ಏನಾದರೂ ಮಾಡಬೇಕೆಂದು ವ್ಯವಹಾರ ನಡೆಸಬಹುದೆ ವಿನಹ ಸಿ.ಓ.ಡಿ. ತನಿಖೆ ಬಹುಶಃ ಅಷ್ಟು ಉಪಯೋಗಕ್ಕೆ ಬರುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಅದೇ ರೀತಿ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಕೇಳಿರುವಂಥ ಪ್ರಶ್ನೆಗಳಿಗೆ ಆದಷ್ಟು ಅವರಿಗೆ ಮನವರಿಕೆ ಯಾಗುವಂತೆ ಉತ್ತರ ಕೊಟ್ಟಿದ್ದೇನೆ. ನಿಜವಾಗಿಯೂ ಹೇಳುವುದಾದರೆ ಅವರ ಪೂರ್ಣ ಸಹಕಾರ ನಮಗೆ ಇರಬೇಕು ಅವರ ಸಹಕಾರ ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಇದು ಒಬ್ಬ ಮಾಡುವಂಥ ಸಹಕಾರ ಇಲಾಖೆಯಲ್ಲ ಎಂದು ಹೇಳುತ್ತೇನೆ. ಹಿಂದೆ ಈ ಇಲಾಖೆಯಲ್ಲಿ ಎರಡು ವರ್ಷಗಳು ಜನರು ಮಂತ್ರಿಗಳಿದ್ದರು ನಾನು ಸಹಕಾರ ಮಂತ್ರಿ ಸ್ಥಾನವನ್ನು ವಹಿಸಿಕೊಂಡು ೫೮–೫೯ ದಿವಸಗಳು ಆಯಿತು. ಇನ್ನೂ ಕೂಡ ನಾನು ಇದರ ಬಗ್ಗೆ ಅಧ್ಯಯನ ಮಾಡುತ್ತಿದ್ದೇನೆ ಆದರೂ ಸಹ ಇನ್ನೂ ಕಾಲಾವಕಾಶ ಮಾಡಿಕೊಂಡು ಪೂರ್ಣ ಅಧ್ಯಯನವನ್ನು ಇನ್ನು ಕೆಲವೇ ದಿವಸಗಳಲ್ಲಿ ಮುಗಿಸಿಕೊಂಡು ಈ ಒಂದು ಸಹಕಾರ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ತರಲಿಕ್ಕೆ ಏನೇನು ಕಾರ್ಯಕ್ರಮ ತೆಗೆದು ಕೊಳ್ಳಬೇಕು ಅದನ್ನು ಮಾಡುತ್ತೇನೆ ಈ ಬಗ್ಗೆ ಯಾವ ಪಕ್ಷದವರೇ ಆಗಿರಲಿ, ಎಲ್ಲರ ವತಿಯಿಂದ ಸಜೆಷನ್ ತೆಗೆದುಕೊಂಡು ಈ ಒಂದು ಸಹಕಾರ ಸಂಸ್ಥೆ ಏನಿದೆ, ಇದರ ಬೆಳವಣಿಗೆ ಏನಿದೆ ಅದನ್ನು ಆದಷ್ಟು ಮಟ್ಟಿಗೆ ಇದನ್ನು ಮುಂದೆ ಒಳ್ಳೆಯ ಸಂಸ್ಥೆಯಾಗಿ ಬೆಳೆಸಿಕೊಂಡು ಹೋಗುತ್ತೇನೆಂದು ಈ ಸದನದಲ್ಲಿ ಹೇಳಿ, ಕಾಲಾವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಈ ಕೃಷಿ ವ್ಯವಸಾಯ ಉತ್ಪನ್ನ ಸಮಿತಿಯಲ್ಲಿ ರೈತನ ಶೋಷಣೆ ಆಗಬಾರದು ಎಂದು ಹೇಳಿ, ಹಿಂದಿನ ಸರ್ಕಾರ ಬಹಳಷ್ಟು ಕಾನೂನುಗಳನ್ನು

ಬದಲಾವಣೆ ಮಾಡಿದರು. ಆದರೆ ನನಗೆ ಈಗ ಅನಿಸುತ್ತದೆ, ನಾನು ಮಾಡಿದ್ದು ತಪ್ಪು ಎಂದು ಹೇಳಿ ಕಾರಣ ಅಂದರೆ, ಪ್ರತಿ ಮಾರ್ಕೆಟ್‌ನಲ್ಲಿಯೂ ಜಾಲಪ್ಪನವರ ಕಮಿಷನ್ ಎಂದು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಶೇಕಡ ೨ರಷ್ಟು, ಶೇಕಡ ೪ರಷ್ಟು, ಶೇಕಡ ೬ರಷ್ಟು ರೈತರಿಂದ ತೆಗೆದುಕೊಳ್ಳುತ್ತಾರೆ, ವರ್ತಕರಿಂದಲೂ ಶೇಕಡ ೨ರಷ್ಟು ತೆಗೆದುಕೊಳ್ಳುತ್ತಿದ್ದಾರೆ. ತಮ್ಮ ಸರ್ಕಾರ ಇದನ್ನು ನಿಲ್ಲಿಸುವುದಕ್ಕೆ ಎಷ್ಟರ ಮಟ್ಟಿಗೆ ಶಕ್ತವಾಗಿದೆ. ಕಾರಣಾಂತರಗಳಿಂದ ಒಂದು ವರ್ಗದವರೇ ಜಾಸ್ತಿ ಕಮಿಷನ್ ವಿಜೆಂಟ್ಸ್ ಇದ್ದಾರೆ. ನಾನು ಪುನಃ ಪುನರಪಿ ಹೇಳಬೇಕಾದ ಅವಶ್ಯಕತೆ ಇಲ್ಲ. ನಾವು ಮಾಡಿದ ಅಮೆಂಡ್‌ಮೆಂಟ್‌ನ್ನಾದರೂ ಎನ್‌ಫೋರ್ಸ್ ಸರಿಯಾಗಿ ಮಾಡಿದರೆ ಕೆಲವರನ್ನು ಶಿಕ್ಷೆಗೆ ಒಳಪಡಿಸಬಹುದು. ಆಜ್ಜೀಬಾಳ್ ಹೆಗಡೆ ಅವರ ಕಮಿಟಿ ಮಾಡಿ ಅವರು ರಿಪೋರ್ಟ್ ಕೂಡ ಕೊಟ್ಟಿದ್ದಾರೆ. ಆದರಲ್ಲಿ ಪೂರ್ಣವಾಗಿ ಯಾರೂ ಕಮಿಷನ್ ತೆಗೆದುಕೊಳ್ಳಬಾರದೆಂದು ಅಬಾಲಿಷ್ ಮಾಡಿ ಎಂದು ಹೇಳಿದ್ದಾರೆ. ಅದನ್ನಾದರೂ ಮಾಡುವುದಕ್ಕೆ ಸಾಧ್ಯವಾದರೆ ಮಾಡಿ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಎನ್‌ಫೋರ್ಸ್‌ಮೆಂಟ್ ಸೆಲ್ ಮಾಡಬೇಕೆಂದು ನಾನು ಹಿಂದೆ ಮಂತ್ರಿಯಾಗಿದ್ದಾಗ ಮಾಡಿ ಜಾರಿಗೆ ತಂದಿದ್ದೆ, ಅದರ ಬಗ್ಗೆ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಅದನ್ನು ತಾವು ಮಾಡದೇ ಇದ್ದರೆ, ಈ ಶೋಷಣೆ ನಿಲ್ಲಿಸುವುದಕ್ಕೆ ಆಗುವುದಿಲ್ಲ, ಪುನಃ ಸೇರಾಯಿಕೆಯನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ನಾನು ಅದಕ್ಕೆ ಅಮೆಂಡ್‌ಮೆಂಟ್ ತಂದಾಗ ಬಹಳಷ್ಟು ಕಷ್ಟ ಅನುಭವಿಸಿದ್ದೆ, ಕಡೆಗೆ ನಾನು ರಾಜೀನಾಮೆ ಕೊಡುತ್ತೇನೆಂದು ಹೆದರಿಸಿ ಅಮೆಂಡ್‌ಮೆಂಟ್ ತಂದೆ. ಏಕೆಂದರೆ ನಾನು ಸಹಕಾರಿ ರೈತನಾಗಿ ಎ.ಪಿ.ಎಂ.ಸಿ. ವ್ಯಾಪಾರಕ್ಕೆಟ್ಟಿಯಲ್ಲಿ ತರಕಾರಿ ಮತ್ತು ಹಣ್ಣುಗಳನ್ನು ತೆಗೆದುಕೊಂಡು ದವಸ ಧಾನ್ಯಗಳನ್ನು ತೆಗೆದುಕೊಂಡು ೨೦ ವರ್ಷಗಳಿಂದ ಕಷ್ಟವನ್ನು ಅನುಭವಿಸಿದ್ದೆ. ಇದನ್ನು ಕ್ರೋಢೀಕರಿಸಿ ಅಮೆಂಡ್‌ಮೆಂಟ್ ಅನ್ನು ತಂದಿದ್ದೇನೆ. ಸರ್ವಾನುಮತದಿಂದ ನಾನಿಕೆ. ಹೆಚ್. ಪಾಟೀಲರು ಚರ್ಚೆಯಿಲ್ಲದೆ ಅದನ್ನು ಒಪ್ಪಿಕೊಂಡರು. ಆದರ ಪರಿಣಾಮವಾಗಿ ಇವತ್ತು ಬಹಳ ಕಷ್ಟವಾಗಿದೆ. ದಯವಿಟ್ಟು ಅದರ ಬಗ್ಗೆ ಯೋಚನೆ ಮಾಡಬೇಕು.

ಎರಡನೆಯದಾಗಿ ಚುನಾವಣೆ ಮಾಡುವ ಬಗ್ಗೆ ಏಕೆ ನಿಧಾನ ಮಾಡುತ್ತೀರಿ? ಕೋ ಆಪರೇಟಿವ್ ಚುನಾವಣೆಯಲ್ಲಿ ಬೇರೆ ಕಾಂಪ್ಲಿಕೇಷನ್ ಇರುವುದರಿಂದ ನೀವು ಸೆಕ್ಷನ್ ೧೨೭ ಅನ್ನು ಉಪಯೋಗಿಸಿದ್ದೀರಿ, ಅದನ್ನು ಉಪಯೋಗಿಸಬಾರದು. ಎಮರ್ಜೆನ್ಸಿಯಲ್ಲಿ ಕಾನ್ಸ್‌ಟಿಟ್ಯೂಷನ್ ಸಸ್ಪೆಂಡ್ ಮಾಡಿದ ಹಾಗೆ. ೧೨೭ ಅನ್ನು ಉಪಯೋಗಿಸಿ ಪೂರ್ತಿಯಾಗಿ ಮಾಡುವುದು ಅಷ್ಟು ಸರಿಯಲ್ಲ ಅನ್ನುವುದು ನನ್ನ ಭಾವನೆ. ಯಾವುದೋ ಒಂದು ಇನ್ಸ್‌ಟ್ರೂಮೆಂಟ್‌ಗೆ, ಎರಡು ಇನ್ಸ್‌ಟ್ರೂಮೆಂಟ್‌ಗೆ, ಎಕ್ಸಮ್‌ಷನ್ ಕೊಡುವುದಕ್ಕೆ ೧೨೭ ಸೆಕ್ಷನ್ ಉಪಯೋಗಿಸಬೇಕೇ ವಿನಃ ಕಾನೂನನ್ನೇ ರದ್ದುಗೊಳಿಸುವುದು ಸರಿಯಾದುದ್ದಲ್ಲ. ಅದೇನು ಮಾಡಿದ್ದೀರಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗಲಿವುದಿಲ್ಲ. ಇಲ್ಲಿ ಚುನಾವಣೆಗೆ ಮಳೆಗಾಲ ಅನ್ನುವ ಕಾರಣ ಕೊಡುವ ಅವಶ್ಯಕವಿಲ್ಲ. ೨-೩ ಜಿಲ್ಲೆಗಳನ್ನು ಬಿಟ್ಟು ಮಿಕ್ಕ ಎಲ್ಲಾ ಜಿಲ್ಲೆಗಳಲ್ಲಿ ತಾವು ಚುನಾವಣೆಯನ್ನು ಕೂಡಲೇ ತರಬೇಕು. ನಿಮ್ಮ ಪಕ್ಷ ಬರಲಿ, ನಮ್ಮ ಪಕ್ಷ ಬರಲಿ, ಯಾರೇ ಬರಲಿ ರೈತರ ಹಿತವನ್ನು ಕಾಪಾಡುತ್ತಾರೆ, ಬೇಗ ಈ ಚುನಾವಣೆಯನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ ಬ್ಯಾಟರಾಯನಪುರದ ಹತ್ತಿರ ತರಕಾರಿ ಮತ್ತು ಹಣ್ಣಿನ ಸಗಟು ಮಾರುಕಟ್ಟೆ ಮಾಡಬೇಕೆಂದು ಹೇಳಿ ನಾನು ಮಂತ್ರಿಯಾಗಿದ್ದಾಗ ಸುಮಾರು ೩೮-೪೦ ಎಕರೆ ಜಮೀನನ್ನು ಅಕ್ವೈರ್ ಮಾಡಬೇಕೆಂದು ಸರ್ಕಾರಕ್ಕೆ ಪ್ರಪೋಸಲ್ ಕೊಟ್ಟು ಹಣವನ್ನು ಕಟ್ಟಿದ್ದೇನೆ. ಬೆಂಗಳೂರಿನ ಎ.ಪಿ.ಎಂ.ಸಿಯವರು ಅಕ್ವೈರ್ ಮಾಡುವುದಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿ ಹಣವನ್ನು ಕಟ್ಟಿ ನಾಲ್ಕು ವರ್ಷವಾಯಿತು. ಅಲ್ಲಿ ಎಲ್ಲಾ ಬಿಲ್ಡಿಂಗ್‌ಗಳು ಬರುತ್ತಿವೆ. ಹೇಳುವವರು ಕೇಳುವವರು ದಿಕ್ಕಾರೂ ಇಲ್ಲ. ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ ಬಿನ್ನಮಿಲ್ ಎದುರಿಗೆ ಸುಮಾರು ೪ ಎಕರೆ ಪ್ರದೇಶ ನಮ್ಮ ಜಮೀನು ಇದೆ. ಒಕ್ಕಲಿಗರವರಾಗಿರುವುದನ್ನೆಲ್ಲ ಬಿಡಿಸಿ ಎ.ಪಿ.ಎಂ.ಸಿ ಬೆಂಗಳೂರಿನವರು ಅಲ್ಲಿ ಕಟ್ಟಡವನ್ನು ಕಟ್ಟಿಸಿದ್ದಾರೆ ಅದರ ಉದ್ದೇಶವೇನೆಂದರೆ ರೈತರು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ಅವರೇ ತೆಗೆದುಕೊಂಡು ಬಂದು ತಾವೇ ಮಾರಿಕೊಂಡು ಹೋಗಬೇಕು, ಕಮಿಷನ್ ವಿಜೆಂಟಿಗೆ ಅಲ್ಲಿ ಪ್ರವೇಶವಿಲ್ಲ. ಮತ್ತು ಎ.ಪಿ.ಎಂ.ಸಿಯವರು ಸೂಪರ್‌ವಿಷನ್‌ನಲ್ಲಿ ಮಾಡಿಕೊಂಡು ಹೋಗುವಂತೆ ಮಾಡಿದ್ದೇವೆ. ಇದನ್ನು ಮಾಡಲು ೨ ಕೋಟಿ ರೂಪಾಯಿ ಖರ್ಚಾಗಿದೆ.

ಉಪಾಧ್ಯಕ್ಷೆಯವರು — ಜಾಲಪ್ಪನವರೆ ಬಹಳ ಹೊತ್ತಾಗಿದೆ, ಬೇಗ ಮುಗಿಸಿ.

ಶ್ರೀ ಆರ್. ಎಲ್. ಜಾಲಪ್ಪ.— ನೀವು ನಿನ್ನೆ ಮಾತನಾಡುವುದಕ್ಕೆ ಟೈಂ ಕೊಡಲಿಲ್ಲ. ನಾನು ಐದು ವರ್ಷ ಆಡಳಿತವನ್ನು ನಡೆಸಿದ್ದೇನೆ. ನಾನು ಕೇಳಿದಾಗ ನಿಮ್ಮ ಪಕ್ಷದವರು ಜಾಸ್ತಿ ಸಮಯ ತೆಗೆದುಕೊಂಡಿದ್ದಾರೆಂದು ಹೇಳಿದಿರಿ...

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಇದುವರೆಗೂ ಸಹಕಾರ ಮಂತ್ರಿಗಳು ಬಂದಿದ್ದಾರೆಂದು ಗೊತ್ತಿರಲಿಲ್ಲ, ಈಗ ಗೊತ್ತಿದೆ.

ಶ್ರೀ ಆರ್. ಎಲ್. ಜಾಲಪ್ಪ.— ಅಲ್ಲಿ ಕುಳಿತಿರುವವರು ನಮ್ಮ ಸಮಸ್ಯೆ ಏನು ಎಂದು ಅರ್ಥ ಮಾಡಿಕೊಳ್ಳಬೇಕು. ಬ್ಯಾಟರಾಯನಪುರದ ಹತ್ತಿರ ನಾವು ಅಕ್ವೈರ್ ಮಾಡಬೇಕೆಂದು ಒಂದೂವರೆ ಕೋಟಿ ರೂಪಾಯಿಯನ್ನು ಸರ್ಕಾರಕ್ಕೆ ಕಟ್ಟಿದ್ದೇವೆ. ಅದರ ಬಗ್ಗೆ ಯೋಚನೆ ಮಾಡಿ ಬೇಗ ಆದನ್ನು ಅಕ್ವೈರ್ ಮಾಡಿಸಿ, ಹಣ್ಣು ಮತ್ತು ತರಕಾರಿ ಮಾರಾಟ ಮಾಡುವುದಕ್ಕೆ ವಿಪರ್ಯಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಿನ್ನಮಿಲ್ ಹತ್ತಿರ ಈಗ ಕಟ್ಟಡ ಕಟ್ಟಿ ಕಂಪ್ಲೀಟ್ ಆಗಿದೆ. ಅದನ್ನು ಏನು ಮಾಡಬೇಕೆಂಬುದು ನಿಮಗೆ ಗೊತ್ತಿಲ್ಲ. ಅದನ್ನು ಕಟ್ಟಿರುವ ಉದ್ದೇಶವೇನೆಂದರೆ ಹಣ್ಣು ಮತ್ತು ತರಕಾರಿ ಬೆಳೆದ ರೈತನು ನೇರವಾಗಿ ಅಲ್ಲಿಗೆ ತೆಗೆದುಕೊಂಡು ಬಂದು ಅವರೇ ಮಾರಿಕೊಳ್ಳಬೇಕು. ಕಮಿಷನ್ ಏಜೆಂಟ್ ಮಧ್ಯೆ ಪ್ರವೇಶ ಮಾಡಕೂಡದು ಇದಕ್ಕೋಸ್ಕರ ಅಲ್ಲಿ ತೆಗೆದುಕೊಂಡು ಬಂದಿದ್ದೇವೆ. ಮಾರ್ಕೆಟ್ ಸೆಸ್ ಎಂಟಾಣೆಯೂ, ರೂಪಾಯಿಯೂ ಕೊಡಬೇಕೆಂದು ಏನಿದೆ, ಅಥವಾ ನೂರಕ್ಕೆ ಎಂಟಾಣೆ ಮಾಡಿದರೆ ಪರವಾಗಿಲ್ಲ. ಆವರಿಗೆ ಆಶೋ ಮಾಡಿದರೆ ಅವರು ಮಾರಿಕೊಂಡು ಹೋಗುತ್ತಾರೆ. ಅದನ್ನು ಬೇಗ ಇನಾಗ್ಯುರೇಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಹೆಚ್. ಆರ್. ರಾಜು.— ಎನ್‌ಫೋರ್ಸ್‌ಮೆಂಟ್ ಸೆಲ್, there is a proposal before the Corporation. Action will be taken soon. ತರಕಾರಿ ಮಾರುಕಟ್ಟೆ ಬಗ್ಗೆ ಏನು ಕೇಳಿದರೆ ಅವರ ಬಗ್ಗೆ ಸ್ಟೇ ಇರುವುದರಿಂದ ಈಗ ಮುಂದುವರಿಸುವುದಕ್ಕೆ ಆಗುವುದಿಲ್ಲ. ಇನ್ನು ಬಿನ್ನಿ ಮಿಲ್ ಮಾರ್ಕೆಟ್ ಬಗ್ಗೆ ಹೇಳಿದಿರಿ ? ಅದಕ್ಕೆ ಇನ್‌ಫ್ರಾಸ್ಟ್ರಕ್ಚರ್ ಕೊನೆ ಹಂತದಲ್ಲಿ ಇರುವುದರಿಂದ ಈ ಕೆಲಸ ಮುಗಿದ ತಕ್ಷಣ ತಾವು ಏನು ಹೇಳಿದಿರಿ ಓಪನ್ ಮಾಡಿ ಎಂದು ಆ ಕಾರ್ಯಕ್ರಮ ಹಾತಿಕೊಳ್ಳುತ್ತೇವೆ. ಇನ್ನು ಚುನಾವಣೆ ಬಗ್ಗೆ ತಮಗೇ ಗೊತ್ತಿದೆ ತಾವೂ ಕೂಡ ಅದಕ್ಕೆ ಫಾರ್ ಆಗಿ ಇದ್ದೀರಿ ಎಂದು ನನಗನ್ನಿಸುತ್ತದೆ. ಮಳೆಗಾಲವಾದ್ದರಿಂದ ಅದನ್ನು ಮುಂದೂಡಬೇಕೆಂದು ಹೇಳುತ್ತಿದ್ದಾರೆ. ಇದರಲ್ಲಿ ಯಾವ ವಿಧವಾದ ತೊಂದರೆ ಇದೆ ಎಂಬುದೂ ತಮಗೂ ಗೊತ್ತು. ಬೇರೆ ಇನ್ನಾವುದೂ ತೊಂದರೆ ಇಲ್ಲಿ ಇದ್ದಂತೆ ಕಾಣಲಿಲ್ಲ. ದಿವಸಕ್ಕೆ ಸುಮಾರು ೧೦-೧೫ ಮನವಿಗಳು ರೈತರಿಂದ ಬರುತ್ತಿತ್ತು ಅದುದರಿಂದ ಇದನ್ನು ಮಾಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ.— ರೈತರು ಕೇಳಲಿಲ್ಲ ಕಮಿಷನ್ ಏಜೆಂಟ್‌ಗಳು ಕೇಳಿದ್ದುದು. ನಾನು ಕೇಳಿದ್ದುದು ಎಪಿ. ಎಂಸಿ. ಚುನಾವಣೆ ಮಾಡುವುದಕ್ಕೆ ಅಡ್ಡಿ ಏನು ?

ಡಾ: ಹೆಚ್. ಆರ್. ರಾಜು.— ೧೩ ಪರ್ಸೆಂಟ್ ಮಾತ್ರ ಇದ್ದಾರೆ ಇನ್ನು ೮೭ ಪರ್ಸೆಂಟ್ ಡಿಫಾಲ್ಟರ್ಸ್ ಇದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್ — ಮಾನ್ಯ ಜಾಲಪ್ಪನವರು ಮೊಟ್ಟ ಮೊದಲನೆಯದಾಗಿ ಎಪಿ.ಎಂಸಿ ಬಗ್ಗೆ ಹೇಳಿದ್ದಾರೆ. ಅತೀವ ಅಸ್ಥೆಯಿಂದ ಇದಕ್ಕೆ ಚುನಾವಣೆ ನಡೆಸಬೇಕೆಂಬ ಅಭಿಪ್ರಾಯ ನಮ್ಮದೂ ಇದೆ. ಇದಕ್ಕೆ ಯಾವ ರೀತಿಯಿಂದಲೂ ತಡಮಾಡುವುದಿಲ್ಲ. ಮಾನ್ಯ ಜಾಲಪ್ಪನವರು ಹೇಳಿದ ಹಾಗೆ ಕಾನ್‌ಸ್ಟಿಟ್ಯೂಯೆನ್ಸಿ ಬದಲಾವಣೆಯಾಗುವುದು ಅವಶ್ಯ ಇದೆ. ಅದು ಆಗ ಆಗಿರಲಿಲ್ಲ. ಈಗ ಕಾನ್‌ಸ್ಟಿಟ್ಯೂಯೆನ್ಸಿಯನ್ನು ಬದಲಾವಣೆ ಮಾಡಬೇಕಾದರೆ ಅದಕ್ಕೆ ಕಾನೂನು ಆಗಬೇಕು ಅದನ್ನು ಈಗಾಗಲೇ ಸರಕಾರ ಸಂಪೂರ್ಣವಾಗಿ ಗಮನಿಸಿ ಆ ಬಿಲ್ ನಾಳೆ ಸಚಿವ ಸಂಪುಟದ ಮುಂದೆ ಬಂದರೆ ಇಲ್ಲಿ ನಮ್ಮ ಎದುರಿಗೆ ಬರುತ್ತದೆ ಅದಾದ ಮೇಲೆ ಚುನಾವಣಾ ರಂಗ ತಯಾರಾಗುತ್ತದೆ. ಆಗ ಚುನಾವಣೆ ಮಾಡಬಹುದು. ಮಾನ್ಯ ಜಾಲಪ್ಪನವರು ಕಮಿಷನ್ ಬಗ್ಗೆ ಹೇಳಿದರು. ತಾವು ಅಪತ್ತು ಮಾಡಿದ್ದನ್ನು ಅದನ್ನು ಅಭಿನಂದಿಸಿ ಅದನ್ನು ಮುಂದುವರಿಸುತ್ತೇವೆ. ಡಬಲ್ ಕಮಿಷನ್ ತೆಗೆದುಕೊಂಡರೆ ಅಂಜಬೇಕಾಗಿಲ್ಲ ಅವರು ಕಳವು ಮಾಡುತ್ತಾರೆ, ಆ ಕಳ್ಳರನ್ನು ಹಿಡಿಯುವುದಕ್ಕೆ ಮಾನ್ಯ ಮಂತ್ರಿಗಳು ತರುಣರಿದ್ದಾರೆ. ಸಮರ್ಥರಿದ್ದಾರೆ ಕಳ್ಳರನ್ನು ಬಲಿ ಹಾಕಲಿಕ್ಕೆ ಪ್ರಯತ್ನ ಮಾಡುತ್ತಾರೆ. ಸಾರ್ವಜನಿಕರಿಗೆ ರೈತರಿಗೆ ತೊಂದರೆಯಾಗುವುದಿಲ್ಲ. ತಮ್ಮನ್ನು ಅಭಿನಂದಿಸಿ ಅದನ್ನೇ ಮುಂದುವರಿಸುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಒಬ್ಬ ರೈತನು ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಂಡರೆ ೧೨೦ ರೂಪಾಯಿ ಷೇರು ಹಣವೆಂದು ಹೇಳಿ ಹಿಡಿದುಕೊಳ್ಳುತ್ತಾರೆ. ಆತನು ಸಾಲವನ್ನು ವಾಪಸ್ ಕೊಡಬೇಕಾದಗ ೧ ಸಾವಿರ ರೂಪಾಯಿಯು ಮೇಲೆ ಬಡ್ಡಿಯನ್ನು ಹಾಕುತ್ತಾರೆ. ಆತನಿಗೆ ಕ್ಯಾಶ್ ಕೊಡುವುದು ೯೦೦ ರೂಪಾಯಿ ಮಾತ್ರ. ಬಡ್ಡಿಯನ್ನು ಕೊಡುವಾಗ ೧ ಸಾವಿರ ರೂಪಾಯಿಗೆ ಬಡ್ಡಿಯನ್ನು ವಸೂಲು ಮಾಡುತ್ತಾರೆ ಇದು ಅನ್ಯಾಯ. ತಿಳುವಳಿಕೆ ಇಲ್ಲದ ಮುಗ್ಧ ರೈತನನ್ನು ಈ ರೀತಿಯಾಗಿ ನಡೆಸಿಕೊಂಡು ಬಡ್ಡಿ ತೆಗೆದುಕೊಳ್ಳುವುದು ಅನ್ಯಾಯ. ಆತ ಎಷ್ಟು ಸಾಲ ತೆಗೆದು ಕೊಳ್ಳುತ್ತಾನೆ ಅಷ್ಟಕ್ಕೆ ಮಾತ್ರ ಬಡ್ಡಿಯನ್ನು ವಸೂಲು ಮಾಡಬೇಕು. ಷೇರಿಗೆ ಬಡ್ಡಿಯನ್ನು ವಸೂಲು ಮಾಡಬಾರದು. ಷೇರ್ ಹಣವನ್ನು ಸೊಸೈಟಿಯಲ್ಲಿ ಇಟ್ಟುಕೊಂಡು ಆತನ ಮೇಲೆ ಏಕೆ ಬಡ್ಡಿ ಹಾಕುತ್ತೀರಿ. ಡಿವಿಡೆಂಡ್ ಅನ್ನು ಕೂಡ ಕೊಟ್ಟಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್ — ಷೇರ್ ಬಗ್ಗೆ ತಪ್ಪು ತಿಳುವಳಿಕೆ ಇದೆ ನಿಮ್ಮದು ಎಷ್ಟು ಷೇರು ಇರುತ್ತದೆಯೋ ಅದರ ಮೇಲೆ ೧೦ ಪಟ್ಟು ಸಾಲವನ್ನು ಕೊಡಬೇಕಾಗುತ್ತದೆ. ಹತ್ತು ಪಟ್ಟು ಕೊಟ್ಟರೆ ಅಪೆಕ್ಸ್ ಬ್ಯಾಂಕ್‌ನವರು ಸಾಲ ಕೊಡುತ್ತಾರೆ ಆ ಷೇರ್ ಇಲ್ಲದಿದ್ದರೆ ಪೇಗೆ ಕೋ-ಆಪರೇಟೀವ್ ಸೋಸೈಟಿಯವರು ಕೊಡುತ್ತಾರೆ. ಅವರದೇನೂ ಧರ್ಮಾರ್ಥ ಸಂಸ್ಥೆ ಅಲ್ಲ ಎಂಬುದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನೀವು ಕೊಟ್ಟಂತಹ ಹಣವನ್ನು ಕೂಡಿಸಿ ಅದರ ಮೂಲಕವೇ ತಮಗೆ ಹಣವನ್ನು ಕೊಡುತ್ತಾರೆ. ಷೇರ್ ಹಣವನ್ನು ಮೊದಲೇ ಅವರು ಕಟ್ಟ ಬೇಕಾಗುತ್ತದೆ. ಇಲ್ಲದಿದ್ದರೆ ಅವರು ಸಾಲ ಕೊಡುವುದರಲ್ಲಿಯೇ ಅದನ್ನು ಹಿಡಿದುಕೊಳ್ಳುತ್ತಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.— ಷೇರು ಹಣವನ್ನು ತೆಗೆದುಕೊಳ್ಳಲಿ. ಆದರೆ ಆ ಷೇರು ಹಣದಮೇಲೂ ಕೂಡ ಏತಕ್ಕೆ ಬಡ್ಡಿಯನ್ನು ಹಾಕಬೇಕು ?

ಶ್ರೀ ಕೆ. ಹೆಚ್. ಪಾಟೀಲ್.— ನಮ್ಮಿದೂ ತಪ್ಪಿದೆ. ಇದರ ವಾಸ್ತವ ಸಂಗತಿ ಎಂದರೆ, ನಿಮ್ಮ ಷೇರು ಹಣದ ಮೇಲೆ ನಾವು ಬಡ್ಡಿಯನ್ನು ತೆಗೆದುಕೊಳ್ಳುವುದಿಲ್ಲ. ಆದರೆ ನಿಮ್ಮ ಹತ್ತಿರ ಹಣ ಇರುವುದಿಲ್ಲ ವಾದ್ದರಿಂದ ಸಾಲವನ್ನು ಕೊಡುವಾಗ ಷೇರು ಹಣವನ್ನು ನೀವು ಮುರಿದುಕೊಂಡು ಉಳಿದ್ದದನ್ನು ಕೊಡಿ ಎಂದು ಹೇಳುತ್ತಾರೆ. ಆದ್ದರಿಂದ ಅದರ ಮೇಲೆ ಬಡ್ಡಿಯನ್ನು ಹಾಕುತ್ತೇವೆ. ನೀವು ನಿಮ್ಮ ಮನೆಯಿಂದ ಷೇರು ಹಣವನ್ನು ತಂದುಕೊಟ್ಟರೆ ಆಗ ಅವರಿಗೆ ಪೂರ್ತಿ ಹಣವನ್ನು ಕೊಡುತ್ತಾರೆ. ಆದರೆ ಮನೆಯಿಂದ ತರಲಿಕ್ಕೆ ಹಣ ಇಲ್ಲದಿರುವುದರಿಂದ ಅವರು ಹಣವನ್ನು ಮುರಿದುಕೊಳ್ಳಿ ಎಂದು ಹೇಳುತ್ತಾರೆ. ಅದು ನಿಮ್ಮ ಹಣ. ನಿಮ್ಮ ಹಣಕ್ಕೆ ನಾವು ಬಡ್ಡಿಯನ್ನು ಹಾಕುವುದಿಲ್ಲ

ಶ್ರೀ ಕೆ. ಹೆಚ್. ಹನುಮೇಗೌಡ.— ನೀವು ಷೇರನ್ನು ತೆಗೆದುಕೊಳ್ಳುವುದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ. ತಮಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಒಬ್ಬ ರೈತನಿಗೆ ೧೦೦೦ ರೂ. ಮಂಜೂರಾಗಿರುತ್ತದೆಂದು ಇಟ್ಟುಕೊಳ್ಳೋಣ; ಅದರಲ್ಲಿ ೧೦೦ ರೂ. ಷೇರು ಹಣವನ್ನು ಮುರಿದುಕೊಳ್ಳುತ್ತಾರೆ. ಅಂದರೆ ಆ ರೈತನಿಗೆ ನೀವು ಕೊಡತಕ್ಕದ್ದು ಕೇವಲ ೯೦೦ರೂ.ಗಳು ಮಾತ್ರ ಆದರೆ ಬಡ್ಡಿಯನ್ನು ಹಾಕುವಾಗ ೧೦೦೦ರೂ.ಗಳಿಗೂ ಬಡ್ಡಿಯನ್ನು ಏತಕ್ಕೆ ಹಾಕಬೇಕು ? ಆ ಷೇರು ಹಣ ನಿಮ್ಮ ಸೊಸೈಟಿಯಲ್ಲೇ ಇರುತ್ತದೆ, ಈ ದುಡ್ಡನ್ನು ನಮಗೇನಾದರೂ ಕೊಡುತ್ತಾರೆಯೆ ? ರೈತ ಉಪಯೋಗ ಮಾಡದೇ ಇರತಕ್ಕ ಹಣಕ್ಕೆ ಏತಕ್ಕೆ ಬಡ್ಡಿಯನ್ನು ತೆಗೆದುಕೊಳ್ಳಬೇಕು ? ಮಾನ್ಯ ಮಂತ್ರಿಗಳು ಹೊಸದಾಗಿ ಬಂದಿರುವುದರಿಂದ ಇದನ್ನು ಎಕ್ಸಾಮಿನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಹೆಚ್. ಆರ್. ರಾಜು.— ಮಾನ್ಯ ಸದಸ್ಯರು ಹೇಳಿದ್ದನ್ನು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.— ರೈತನಿಗೆ ಸಾಲ ಕೊಡಬೇಕಾದರೆ ಹಲವಾರು ಬ್ಯಾಂಕುಗಳು, ಹಲವಾರು ಸಹಕಾರ ಸಂಘಗಳು, ಅಸಿಸ್ಟೆಂಟ್ ಕಮಿಷನರ್‌ರವರು, ಇನ್ನೂ ಮುಂತಾದವರೆಲ್ಲಾ ಕೊಡುತ್ತಾರೆ. ಹಿಂದೆ ನಾನು ಕೇಳಿದ್ದೆ, ಯಾವ ರೈತನಿಗೇ ಆಗಲಿ ಆವನ ಆಸ್ತಿ ಎಷ್ಟಿರುತ್ತದೆ ಅಷ್ಟನ್ನೂ ಕೂಡ ನೀವು ಬರೆಯಿಸಿಕೊಂಡು ಒಂದು ಕ್ರೆಡಿಟ್ ಕಾರ್ಡ್‌ನ್ನು ಕೊಟ್ಟರೆ...

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.— ಮಾನ್ಯ ಹನುಮೇಗೌಡರು ಹೇಳಿದನ್ನು ಮಾನ್ಯ ಮಂತ್ರಿಗಳು ಪರಿಶೀಲಿಸುತ್ತೇನೆಂದು ಹೇಳಿದ್ದಾರೆ...

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ — ರೈತನಿಗೆ ಸಾಲವನ್ನು ಕಮರ್ಷಿಯಲ್ ಬ್ಯಾಂಕ್‌ಗಳು, ಕೋ-ಆಪರೇಟಿವ್ ಸೊಸೈಟಿಗಳು, ರೆವಿನ್ಯೂ ಇಲಾಖೆಯವರು. ಹೀಗೆ ನಾಲ್ಕಾರು ಜನರು ಕೊಡುತ್ತಾರೆ. ಆದರೆ ಇದರಿಂದ ರೈತನಿಗೂ ಕೂಡ ತೊಂದರೆಯಾಗುತ್ತದೆಂದು ತಿಳಿದು ನನ್ನ ಒಂದು ಸಲಹೆ ಏನೆಂದರೆ, ಒಂದು ಏರಿಯಾಕ್ಕೆ ಒಂದು ಬ್ಯಾಂಕ್ ಅಥವಾ ಒಂದು ಕೋ-ಆಪರೇಟಿವ್ ಸೊಸೈಟಿಯನ್ನು ೫-೧೦ ಕಿಲೋಮೀಟರ್‌ನೊಳಗೆ ಕೊಡಬೇಕು. ಆ ಏರಿಯಾದಲ್ಲಿರತಕ್ಕ ರೈತರಿಗೆ ಹೇಗೆ ಅನುಕೂಲ ಮಾಡಬಹುದೆಂದರೆ ಉದಾಹರಣೆಗೆ ಹೇಳುವುದಾದರೆ, ಒಬ್ಬ ರೈತನಿಗೆ ೫ ಲಕ್ಷ ರೂಪಾಯಿಯ ಆಸ್ತಿ ಇದೆಯೆಂದು ಇಟ್ಟುಕೊಳ್ಳೋಣ. ಅವನ ಆಸ್ತಿಯನ್ನೆಲ್ಲಾ ಯಾವುದಾದರೂ ಒಂದೇ ಬ್ಯಾಂಕಿಗೆ ಬರೆಯಿಸಿಕೊಂಡು ಒಂದು ಕ್ರೆಡಿಟ್ ಕಾರ್ಡ್ ಎಂದು ಕೊಡಬೇಕು. ಅವನು ತನ್ನ ಇಡೀ ವ್ಯವಹಾರವನ್ನೆಲ್ಲಾ ಅಲ್ಲಿಯೇ ಮಾಡುವಂತಿರಬೇಕು. ಈ ವ್ಯವಸ್ಥೆ ಹೊರದೇಶಗಳಲ್ಲೂ ಇದೆಯೆಂದು ಕೇಳಿದ್ದೇನೆ ಆದ್ದರಿಂದ ನಮ್ಮ ಬೆಂಗಳೂರಿನಲ್ಲಿ ಒಬ್ಬ ರೈತ ಸಾಲವನ್ನು ತೆಗೆದುಕೊಂಡರೆ ಅವನಿಗೆ ಒಂದು ಕ್ರೆಡಿಟ್ ಕಾರ್ಡ್‌ನ್ನು ಕೊಟ್ಟಿದ್ದರೆ ಅವನಿಗೆ ಅರ್ಹತೆ ಇದ್ದರೆ ಹಣದ ಅವಶ್ಯಕತೆ ಬಂದಾಗ ಗುಲ್ಬರ್ಗಾಕ್ಕೆ ಹೋಗಿ, ಈ ಕಾರ್ಡನ್ನು ತೋರಿಸಿದರೂ ಅವನಿಗೆ ಹಣ ಸಿಕ್ಕುವಂತಿರಬೇಕು. ಹೊರದೇಶದಲ್ಲಿ ಈರೀತಿ ಕ್ರೆಡಿಟ್ ಕಾರ್ಡ್ ಹೊಂದಿರುವವರು ಎಲ್ಲಿಬೇಕಾದರೂ ಹೋಗಿ ಅದನ್ನು ತೋರಿಸಿದರೆ ಆದರ ವಿವರಗಳನ್ನು ಕಂಪ್ಯೂಟರ್‌ನಲ್ಲಿ ನೋಡಿ ಅವನಿಗೆ ಎಷ್ಟು ಹಣ ಕೊಡಬಹುದು ಎಂಬುದನ್ನು ಪರಿಶೀಲಿಸಿ ಕೇವಲ ಒಂದು ನಿಮಿಷದಲ್ಲೇ ಕೊಡುತ್ತಾರೆ. ಇಂಥ ವ್ಯವಸ್ಥೆಯನ್ನು ಇಲ್ಲಿ ಮಾಡಬೇಕು. ಪದೇಪದೇ ಸಾಲವನ್ನು ಕೊಟ್ಟು ಅವನ ಮನೆಯ ಬಾಗಿಲಿಗೆ ತಿರುಗುವುದು ಬೇಡ. ಆದ್ದರಿಂದ ತಾವು ಇದರ ಬಗ್ಗೆ ಯೋಚನೆ ಮಾಡಿ ಕ್ರೆಡಿಟ್ ಕಾರ್ಡ್ ಸಿಸ್ಟಂನ್ನು ಅಳವಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ ಹೇಳುವುದಾದರೆ ರಾಜಕಾರಣಿಗಳು, ಮತ್ತು ಅಧಿಕಾರಿಗಳೂ ಸೇರಿದುದ್ದನ್ನು ಹೊಡೆಯುತ್ತಾರೆ. ರೈತರಿಗೆ ಒಹಳ ಅನ್ಯಾಯ ಮಾಡುತ್ತಿದ್ದಾರೆ. ಇವರು ಕೊಡತಕ್ಕ ಹಣ ಪೂರ್ತಿ ರೈತನಿಗೆ ಸಿಕ್ಕುವುದಿಲ್ಲ. ಇವರು ಹಣವನ್ನು ತಿಂದು ೨-೩ ವರ್ಷ ಆದಮೇಲೆ ಪೋಲಿಸ್‌ಗೆ ಈ ಕೇಸನ್ನು ರೆಫರ್ ಮಾಡುತ್ತಾರೆ. ಆವರು ೪-೫ ವರ್ಷ ಕಳೆದಮೇಲೆ ಟ್ರೈಬ್ಯುನಲ್‌ಗೆ ಹಾಕುತ್ತಾರೆ, ಅಲ್ಲಿ ಇತ್ಯರ್ಥವಾಗುವುದಕ್ಕೆ ೮-೧೦ ವರ್ಷವಾಗಿಂತ್ತದೆ. ಅಷ್ಟು ಹೊತ್ತಿಗೆ ಕೊಟ್ಟಿವರೂ ಇರುವುದಿಲ್ಲ. ತೆಗೆದುಕೊಂಡವರೂ ಇರುವುದಿಲ್ಲ. ಆದ್ದರಿಂದ ನನ್ನ ಒಂದು ಸಲಹೆ ಎಂದರೆ ಪೋಲಿಸ್‌ಗೆ ರೆಫರ್ ಮಾಡುವುದರ ಬದಲು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಟ್ರಿಬ್ಯುನಲ್ ಎಂದು ಮಾಡಿ ತಕ್ಷಣ ಕೇಸುಗಳನ್ನು ರಿಜಿಸ್ಟರ್ ಮಾಡುವಂತೆ ಮಾಡಬೇಕು. ನೀವು ಪೋಲೀಸ್ ರೆಫರ್ ಮಾಡುವುದರಿಂದ ೧೦೦ಕ್ಕೆ ೯೯ ಕೇಸುಗಳು ವಜಾ ಆಗುತ್ತದೆ. ನೀವು ಪೋಲೀಸ್ ರೆಫರ್ ಮಾಡುವುದರಿಂದ ಸೊಸೈಟಿಯ ಹಣವೂ ಹೋಗುತ್ತದೆ, ಮತ್ತು ದುಡ್ಡನ್ನು ಯಾರು ಹೊಡೆದಿರುತ್ತಾರೆ ಅವರು ಮಜವಾಗಿ ಇರುತ್ತಾರೆ ಏನು ಬೇಕಾದರೂ ಮಾಡಬಹುದೆಂದು ಅವಂಗೆ ಧೈರ್ಯ ಬರುತ್ತದೆ. ನೀವು ಎಷ್ಟುಬೇಕಾದರೂ ದುಡ್ಡನ್ನು ಹೊಡೆಯಿರಿ ಏನೂ ಆಗುವುದಿಲ್ಲ ಎಂದು ಹೇಳುತ್ತಾರೆ. ದುಡ್ಡು ತಿಂದವರಿಗೆ ಶಿಕ್ಷೆ ಆಗುವುದರಿಂದ ಈ ಕೋ-ಆಪರೇಟಿವ್ ಬ್ಯಾಂಕಿಂಗಲೇ ಒಂದು ರೀತಿಯ ಹುಲ್ಲುಗಾವಲು ಇದ್ದಂತಾಗಿದೆ. ಅವರಿಗೆ ಹಗ್ಗ ಮಾಗ್ಗ ದಾರ ಏನೂ ಇಲ್ಲ. ಯಾರು ಎಷ್ಟು ಬೇಕಾದರೂ ಹೊಯ್ದುಕೊಂಡು ಹೋಗಬಹುದು. ದುಡ್ಡು ಹೊಡೆದುಕೊಂಡವರು ದೊಡ್ಡ ದೊಡ್ಡ ಕಾರು, ಬಂಗಲೆಗಳನ್ನು ಇಟ್ಟುಕೊಂಡು ಅನುಕೂಲಸ್ಥರಾಗಿ ಮಜವಾಗಿದ್ದಾರೆ. ಇದನ್ನು ತಪ್ಪಿಸಬೇಕಾದರೆ ಜಿಲ್ಲೆಗೆ ಒಂದೊಂದು ಟ್ರೈಬ್ಯುನಲ್‌ನ್ನು ಮಾಡಿ ೬ ತಿಂಗಳೊಳಗೆ ಅಪರಾಧಿಗಳ ಮೇಲೆ ಕೇಸು ಹಾಕಿ ಅವರ ಪ್ರಾಪರ್ಟಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡ ನಿಜವಾಗಿ ಪ್ರಾಮಾಣಿಕ ರೈತ ಯಾರಿದ್ದಾನೆ ಅವನನ್ನು ಉಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ — ಮಾನ್ಯ ಹನುಮೇಗೌಡರು ತಮ್ಮ ತಪ್ಪು ಸಮಾಜಾಯಿಸಿಯಿಂದ ಸಹಕಾರ ಚಳುವಳಿಯ ವಿಚಾರವಾಗಿ ಮಾಡುತ್ತಿದ್ದಾರೆ. ಮಿಸ್ ಅಪ್ರೋಪ್ರಿಯೇಷನ್, ಮಿಸ್ ಅಪ್ಲಿಕೇಷನ್ ಎಷ್ಟಾಗುತ್ತಿದೆ ಎಂದರೆ ಉಳಿಗ ಸಂಸ್ಥೆಗಳಿಗೆ ಹೋಲಿಸಿದರೆ ಸಹಕಾರ ಸಂಸ್ಥೆಗಳಲ್ಲಿ ಅತಿ ವಿರಳ. ಮಾತನಾಡುವಾಗ ತಪ್ಪಿಸ್ಥಾಗಿ ಸಹಕಾರ ಸಂಸ್ಥೆಗಳ ಬಗ್ಗೆ ಮಾತನಾಡುವುದು ಸ್ವಾಭಾವಿಕ. ಪೊಲೀಸರಿಗೇಕೆ ಹಾಕಿದಿರಿ ಅಂದರು. ಪೊಲೀಸರಿಗೆ ಹಾಕುವುದಿಲ್ಲ. ಸಹಕಾರ ಸಂಸ್ಥೆಗಳಲ್ಲಿನ ಕೇಸುಗಳನ್ನು ನಿಭಾಲೆ ಮಾಡುವುದಕ್ಕೆ ಟ್ರೈಬ್ಯುನಲ್ ಇದೆ. ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೀಸ್ ಇದ್ದಾರೆ. ಸೆಕ್ಷನ್ ೬೫ ರಿಂದ ೬೮ರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ. ಡೆಮಾಕ್ರಟಿಕ್ ಸೆಟ್‌ಅಪ್‌ನಲ್ಲಿ ಮತ್ತೊಬ್ಬರ ಬಗ್ಗೆ ಹೆಚ್ಚು ಮಾತನಾಡುವುದು ಸ್ವಾಭಾವಿಕ. ಆದರೆ ಅದನ್ನು ಸದನದ ಮೂಲಕ ತಳಬಾರದು. ಪತ್ರಿಕಾಕರ್ತರು ಸಹಕಾರ ಚಳುವಳಿ ಹೀಗೆ ಇದೆ ಎಂದು ನೋಡಬಾರದು. ನೂರು ವರ್ಷಗಳ ಇತಿಹಾಸದಲ್ಲಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಮಿಸ್ ಅಪ್ರೋಪ್ರಿಯೇಷನ್

ಮಾಡಿದ್ದಾರೆ ಎಂಬುವನ್ನು ನೋಡಿದಾಗ ಒಂದು ಸಾರ್ವಜನಿಕ ಸಂಸ್ಥೆಯಲ್ಲಿ ಅದಷ್ಟು ೧೮ ಸಾವಿರ ಸಹಕಾರ ಸಂಸ್ಥೆಗಳಲ್ಲಿ ಆಗಿಲ್ಲ. ಕೆಟ್ಟ ಜನರು ಇರುತ್ತಾರೆ, ಇಲ್ಲ ಎಂದು ಅಲ್ಲ. ಅಂಥವರನ್ನು ಎಟ್ಟ ಹಾಕುವುದಕ್ಕೆ ಕಾನೂನುಗಳು ಇವೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.— ತಿಳಿವಳಿಕೆ ಇಲ್ಲದ ಬಡಪೈತರಿಗೆ ಅನ್ಯಾಯವಾಗುತ್ತಿದೆ. ರೈತರಿಗೆ ಅನ್ಯಾಯವಾಗಬಾರದೆಂದು ಹೇಳುತ್ತಿದ್ದೇನೆ. ನಾನು ಎಲ್ಲರೂ ಕಳ್ಳರು ಎಂದು ಹೇಳುತ್ತಿಲ್ಲ. ಸಹಕಾರ ಇಲಾಖೆಯಲ್ಲಿ ಕಾರ್ಯಕ್ರಮ ತೆಗೆದುಕೊಂಡರೆ ಇಷ್ಟೊಂದು ಅದ್ವಾನವಾಗುತ್ತಿರಲಿಲ್ಲ.

ಶ್ರೀ ಎಂ. ಡಿ. ನಂಜುಂಡಸ್ವಾಮಿ.— ಸಹಕಾರ ಮಂತ್ರಿಗಳು ಒಂದು ವಿಚಾರದ ಬಗ್ಗೆ ಉತ್ತರ ಕೊಡಲಿಲ್ಲ. ಇವತ್ತು ಕಂದಾಯ ಮಂತ್ರಿಗಳೂ ಮತ್ತು ಹಣಕಾಸಿನ ಮಂತ್ರಿಗಳು ಇದ್ದಾರೆ. ಕಂದಾಯ ಮಂತ್ರಿಗಳಿಗೆ ಹೇಳುತ್ತಿದ್ದೆ ಸಾಲ ರದ್ದಿಯಾತಿಯನ್ನು ಏತಕ್ಕೆ ಕೇಳುತ್ತಿದ್ದಾರೆ ವ್ಯವಸಾಯವನ್ನು ಇಂಡಸ್ಟ್ರೀಸ್ ಆಗಿ ಎಂದಾದರೂ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆಂದು ಸಹಕಾರ ಮಂತ್ರಿಗಳನ್ನು ಕೇಳುತ್ತೇನೆ. ನಿಮ್ಮ ಪ್ರೊಸೆಸಿಂಗ್ ಯೂನಿಟ್ಸ್ ಅನ್ನು ಏನು ಹಾಕಿಕೊಂಡಿದ್ದೀರಿ ಅದರ ಚಟುವಟಿಕೆ ಕಡಿಮೆ. ಆ ಕಾರಣ ಕೈಗಾರಿಕಾ ಮಂತ್ರಿಗಳ ಜೊತೆ ಮಾತನಾಡಿ ಅದಷ್ಟು ಕೈಗಾರಿಕಾ ನೀತಿ ಏನಿದೆ ಅದನ್ನು ಬದಲಾವಣೆ ಮಾಡಿಕೊಂಡು ಇನ್ನು ಮುಂದೆ ಕರ್ನಾಟಿದಲ್ಲಿ ಯಾವುದೇ ಕೈಗಾರಿಕೆ ಕನಿಷ್ಟ ಆಗ್ರೋಬೇಸ್ಡ್ ಅಂಥ ಎನು ಅನ್ನುತ್ತೀರಿ ಅದು ಸಹಕಾರಿ ಕ್ಷೇತ್ರದಲ್ಲಿ ಸ್ಥಾಪನೆ ಆಗಬೇಕೆಂದು ನಾನು ಮಾತನಾಡಿದ್ದೆ. ಹಣಕಾಸಿನ ಮಂತ್ರಿಗಳು ಇರುವುದರಿಂದ ಹೇಳುತ್ತೀದ್ದೇನೆ. ಹಣಕಾಸಿನ ಮಂತ್ರಿಗಳು ಇಂಡಸ್ಟ್ರೀಸ್ ಬಗ್ಗೆ ಹೇಳುತ್ತಾರೆ, ಕಂದಾಯ ಮಂತ್ರಿಗಳು ಆಗ್ರೋಬೇಸ್ಡ್ ಇಂಡಸ್ಟ್ರೀಸ್ ಬಗ್ಗೆ ಮಾತನಾಡುತ್ತಾರೆ. ಈಗ ಅವರೆಲ್ಲಾ ಇರುವುದರಿಂದ ಇದಕ್ಕೆ ಉತ್ತರಿಸಿದರೆ ಒಳ್ಳೆಯದು.

ಶ್ರೀ ಎಂ. ರಾಜಶೇಖರಮೂರ್ತಿ.— ಆಗ್ರೋಬೇಸ್ಡ್ ಇಂಡಸ್ಟ್ರೀಸ್ ಮಾಡಬಾರದೆಂದು ಇಲ್ಲ ಯಾರಾದರೂ ಮುಂದೆ ಬಂದರೆ ಸರ್ಕಾರ ಏನು ಸಹಕಾರ ಕೊಡಬೇಕೋ ಅದನ್ನು ಕೊಡುವುದಕ್ಕೆ ಸಿದ್ಧವಾಗಿದೆ.

ಶ್ರೀ ಎಂ. ಡಿ. ನಂಜುಂಡಸ್ವಾಮಿ.— ಹಣಕಾಸಿನ ಮಂತ್ರಿಗಳು ಯಾರಾದರೂ ಮುಂದೆ ಬಂದರೆ ಅನ್ನುವುದಕ್ಕಿಂತ ತಾವೇ ಮೋಟಿವೇಟ್ ಮಾಡುವುದು ಒಳ್ಳೆಯದು ಅನಿಸುತ್ತದೆ.

ಶ್ರೀ ಹೆಚ್. ವಿಶ್ವನಾಥಯ್ಯ.— ಮಂತ್ರಿಗಳು ಬಂದು ಕೇವಲ ಎರಡು ತಿಂಗಳಾಗಿದೆ ಎಂಬ ಮಾತನ್ನು ಹೇಳುತ್ತಾ, ಪ್ರಾಥಮಿಕ ಸಹಕಾರ ಸಂಘವನ್ನು ಮತ್ತು ಎಲ್ಲಾ ವಿಧವಾದ ಸಹಕಾರ ಸಂಘಗಳನ್ನು ಪುನರ್ಜೀವನಗೊಳಿಸಲು, ಬಲಗೊಳಿಸಲು ಕ್ರಮ ಕೈಗೊಳ್ಳುತ್ತೇನೆ. ತಾವು ಸಹಕಾರ ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ಈ ಕಡೆಯಿಂದ ಸಹಕಾರ ಇದ್ದೇ ಇದೆ. ತಾವು ಹೇಳಿದ ಹಾಗೆ ಸಹಕಾರ ಸಂಘಗಳಲ್ಲಿ ಯಾವುದೇ ರಾಜಕೀಯ ಪಕ್ಷ ಇಲ್ಲದಿದ್ದರೂ ಸಹಕಾರಿಗಳದೇ ಒಂದು ಪಕ್ಷ ಇದೆ. ಆದ್ದರಿಂದ ಅವರೆಲ್ಲರ ಸಹಕಾರ ತೆಗೆದುಕೊಂಡು ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಮೊದಲನೆಯದಾಗಿ ಬಡ್ಡಿ ರಿಯಾಯಿತಿ ಯೋಜನೆ ಬದಲಾಗಿ ಪ್ರೊಡಕ್ಟಿವ್ ಇನ್‌ಸೆಂಟೀವ್ ಸ್ಕೀಮ್ ತರಬೇಕೆಂದು ಹೇಳಿದ್ದೀರಿ. ಸಮಗ್ರವಾಗಿ ತಿದ್ದುಪಡಿ ತರಬೇಕೆಂದಿದ್ದೀರಿ. ತಿದ್ದುಪಡಿಯನ್ನು ಎಷ್ಟು ದಿವಸದಲ್ಲಿ ತರುತ್ತೀರಿ ? ಮಂಡಲ ಪಂಚಾಯಿತಿ ಆಧಾರದ ಮೇಲೆ ಆರ್ಥಿಕವಾಗಿ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದೀರಿ ಇದರ ಬಗ್ಗೆ ಏನು ಮಾಡುತ್ತೀರಿ ?

ಡಾ: ಎಚ್. ಆರ್. ರಾಜು.— ಮೊದಲನೇ ಪ್ರಶ್ನೆಗೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅದು ಅನ್ವಯವಾಗುತ್ತದೆ. ಎರಡನೆಯ ಪ್ರಶ್ನೆಗೆ ಸದಸ್ಯರಲ್ಲಿಯೇ ಸಮಾರು ಒಂದು ಒಂದೂವರೆ ತಿಂಗಳೊಳಗಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು.— ಮಾನ್ಯ ಆರ್ಥ ಮಂತ್ರಿಗಳು ಈಗ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಂ. ರಾಜಶೇಖರಮೂರ್ತಿ (ಅರ್ಥಮಂತ್ರಿಗಳು). — Madam Deputy Speaker I was to make a statement on the agitation in the Khadi Gramodyog Sangh. As the information which was inevitable is not available. I would be making that statment on Monday.

ಉಪಾಧ್ಯಕ್ಷರು.— ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೨೩, ೨೬, ೩೦, ೫೫ ಮತ್ತು ೫೬ಕ್ಕೆ ಸಂಬಂಧಪಟ್ಟಂತೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ವೆಚ್ಚಕ್ಕೆ ವಿವರದ ವೆಚ್ಚವನ್ನು ಲೇಖಾನುದಾನದಲ್ಲಿ ಮಂಜೂರಾದ ವೆಚ್ಚವೂ ಸೇರಿದಂತೆ ಸಭೆಯು ಮಂಜೂರು ಮಾಡಬೇಕು.

ಪ್ರಸ್ತಾಪ ಅಂಗೀಕೃತವಾಯಿತು. ಮತದ್ತ ಬೇಡಿಕೆಗಳಿಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಪುನರುಚ್ಚರಿಸಲಾಗಿದೆ

(ಸಭೆ ಮಧ್ಯಾಹ್ನ ೩ ಗಂಟೆ ೪೩ ನಿಮಿಷಕ್ಕೆ ಮುಂದೂಡಿ ಮತ್ತೆ ದಿನಾಂಕ ೨೯-೬-೯೦ರಂದು ಬೆಳಿಗ್ಗೆ ೧೦ ಗಂಟೆಗೆ ಸೇರಲು ನಿಶ್ಚಯಿಸಿತು).

ಸಾರಿಗೆ ರಾಜ್ಯ ಮಂತ್ರಿಗಳು

ಅಭಿಯಾಚನೆ ಕ್ರಮಾಂಕ ೨೬—ವಾಹನ ತೆರಿಗೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮ ೭೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೦—ರಸ್ತೆ ಸಾರಿಗೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೬,೫೧,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಸಹಕಾರ ರಾಜ್ಯ ಮಂತ್ರಿಗಳು

ಅಭಿಯಾಚನೆ ಕ್ರಮಾಂಕ ೫೫—ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೬.೭೨.೭೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೩.೪೫.೭೨,೦೦೦ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೬—ಕ್ರಮಪಡಿಸಿದ ಮಾರುಕಟ್ಟೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೭೭ ೪೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು —ಈಗ ಸಭೆ ಮುಂದೂಡಿ ಮತ್ತೆ ಸೋಮವಾರ ೧೧-೦೦ ಘಂಟೆಗೆ ಸೇರಲಿದೆ.

ಸದನವು ಮಧ್ಯಾಹ್ನ ೩ ಘಂಟೆ ೪೩ ನಿಮಿಷಕ್ಕೆ ಮುಂದೂಡಿ ಮತ್ತೆ ದಿನಾಂಕ ೨೬-೭-೯೦ ರಂದು ಬೆಳಿಗ್ಗೆ ೧೧-೦೦ ಘಂಟೆಗೆ ಸೇರಲು ನಿಶ್ಚಯಿಸಿತು.

---

† ಈ ಚಿಪ್ಪೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.